# ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ

ಏಪ್ರಿಲ್ 2020 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 7
ಪುಟ/Pages : 16
ಬೆಲೆ/Price : ₹ 10/–

**Akhila Karnataka Shikshaka Samachar | April 2020 | Monthly**


ಕೋವಿಡ್–19 ಬಿಕ್ಕಟ್ಟಿನ ಸಂದರ್ಭದಲ್ಲಿ ನಮಗಾಗಿ ಹಗಲು–ರಾತ್ರಿ ಶ್ರಮಿಸುತ್ತಿರುವ
ವೈದ್ಯರು – ದಾದಿಯರು – ಆಶಾ ಕಾರ್ಯಕರ್ತೆಯರು – ಶಿಕ್ಷಕರು
ಸೈನಿಕರು – ಆರಕ್ಷಕರು – ನಾಗರಿಕ ಕರ್ಮಚಾರಿಗಳು
ಹಾಗೂ ಸಾರಿಗೆ ವ್ಯವಸ್ಥೆಯಲ್ಲಿರುವ ಎಲ್ಲಾ

## ಕೊರೋನಾ ಯೋಧರಿಗೆ ನಮ್ಮ ಧನ್ಯವಾದಗಳು




**A Journal of Karnataka State Secondary Teachers' Association**

# ಸಂಪಾದಕೀಯ

## ರಾಷ್ಟ್ರಸೇವೆಯಲ್ಲಿ ನಮ್ಮ ಸಂಘಟನೆ

ಆತ್ಮೀಯ ಓದುಗ ಮಿತ್ರರೆಲ್ಲರಿಗೂ ಅಂಬೇಡ್ಕರ್ ಜಯಂತಿ, ಬಸವ ಜಯಂತಿ ಹಾಗೂ ಅಕ್ಷಯ ತೃತೀಯದ ಶುಭಾಶಯಗಳು.

**ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುವಾ**
**ಧ್ಯೇಯ ಮಹಾಜಲಧಿಯೆಡೆಗೆ ಸಲಿಲವಾಗಿ ಹರಿಯುವಾ**
**ಲೋಕಹಿತದ ಕಾಯಕ ನಾಡಿಗಭಯದಾಯಕ**
**ವ್ಯಕ್ತಿವ್ಯಕ್ತಿಯಾಗಲಿಂದು ನೈಜ ರಾಷ್ಟ್ರಸೇವಕ**

ಈ ಒಂದು ಗೀತೆಯ ಸಾಲುಗಳೇ ಸಾಕು ನಮ್ಮನ್ನೆಲ್ಲಾ ಸೇವಾ ಕಾರ್ಯಕ್ಷೇತ್ರದೆಡೆಗೆ ಸೆಳೆಯಲು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಕೇಂದ್ರ ಮಟ್ಟದಲ್ಲಿರುವ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಧ್ಯೇಯ ವಾಕ್ಯವೇ

**ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ । ಶಿಕ್ಷಣದ ಹಿತಕ್ಕಾಗಿ ಶಿಕ್ಷಕ । ಶಿಕ್ಷಕರ ಹಿತಕ್ಕಾಗಿ ಸಮಾಜ**

ಈ ಧ್ಯೇಯ ವಾಕ್ಯಕ್ಕೆ ಮತ್ತೊಂದು ಗರಿಯನ್ನು ಸಿಕ್ಕಿಸಬಹುದು ಅದೇನೆಂದರೆ ಸಮಾಜದ ಹಿತಕ್ಕಾಗಿ ಶಿಕ್ಷಕ. ಏಕೆ ಈ ಮಾತುಗಳು ಎನ್ನುವುದಾದರೆ ರಾಷ್ಟ್ರದ ಪರಿಸ್ಥಿತಿ ತಮಗೆಲ್ಲರಿಗೂ ತಿಳಿದಿರುವಂತಹುದೇ ಆಗಿದೆ. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಶಿಕ್ಷಕ ಸಂಘಟನೆಯ ಪಾತ್ರವೇನು? ಕೇವಲ ಸಂಬಳ, ಅನುಕೂಲಗಳು, ಬೇಡಿಕೆಗಳಿಗೆ ಮಾತ್ರ ಶಿಕ್ಷಕ ಸಂಘಟನೆ ಸೀಮಿತವೇ? ಎಂಬ ಪ್ರಶ್ನೆಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ನೇರ, ದಿಟ್ಟ, ನಿರಂತರ ಉತ್ತರವೆಂದರೆ "ಎಂದಿಗೂ ಇಲ್ಲ". ಕೇವಲ ಹಕ್ಕುಗಳಿಗಾಗಿ ಸರ್ಕಾರದೊಡನೆ ಹೋರಾಡಲು ಮಾತ್ರ ನಮ್ಮ ಈ ಸಂಘಟನೆ ಕಾರ್ಯ ನಿರ್ವಹಿಸುವುದಿಲ್ಲ. ಸಂಘಟನೆಯ ಒಂದು ಭಾಗ ಮಾತ್ರ ಅದು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಎಂದಿಗೂ ತನ್ನ ಕರ್ತವ್ಯವನ್ನು ಮರೆಯುವುದಿಲ್ಲ.

ರಾಷ್ಟ್ರದ ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕಾರ್ಯಕರ್ತರು ಅನೇಕ ರಾಜ್ಯಗಳಲ್ಲಿ ಅವಶ್ಯಕ ಜನರಿಗೆ ಸೇವೆಯನ್ನು ನೀಡುತ್ತಿದ್ದಾರೆ. ಸ್ವ ಇಚ್ಛೆಯಿಂದ ಸರ್ಕಾರದಿಂದ ಸೇವಾ ಅನುಮತಿ ಪಡೆದು, ಸರ್ಕಾರದ ನಿಯಮಗಳಿಗೆ ಬದ್ಧರಾಗಿ ಕೊರೊನಾ ಮಹಾಮಾರಿಯಿಂದ ಮತ್ತು ಲಾಕ್‌ಡೌನ್ ನಿಯಮಗಳಿಂದ ತೊಂದರೆಗೊಳಗಾದವರಿಗೆ ಸಹಾಯ ಮಾಡುತ್ತಿದ್ದಾರೆ. ಅನೇಕ ರಾಜ್ಯಗಳ ಕಾರ್ಯಕರ್ತರು ಆಹಾರ ಪೊಟ್ಟಣಗಳು, ದಿನಸಿ ಪದಾರ್ಥಗಳು, ಔಷಧಿಗಳ ಪೂರೈಕೆ, ನಿರಾಶ್ರಿತರಿಗೆ ಆಶ್ರಯ ನೀಡುವಂತಹ ಮಹತ್ತರ ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ. ದೇಶದ ಅನೇಕ ರಾಜ್ಯಗಳ ಕಾರ್ಯಕರ್ತರು ಸ್ವ ಇಚ್ಛೆಯಿಂದ ಪ್ರಧಾನಿ ಪರಿಹಾರ ನಿಧಿಗೆ ಮತ್ತು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಹಣವನ್ನು ಸಹ ಕಳುಹಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ತೊಂದರೆಗಳನ್ನು ನಿಭಾಯಿಸಲು ಸರ್ಕಾರಕ್ಕೆ ಅನೇಕ ಸಲಹೆ ಸೂಚನೆಗಳನ್ನು ಸಹ ನೀಡುತ್ತಿದ್ದಾರೆ. ದಾಖಲಾತಿ, ಪರೀಕ್ಷೆಗಳು, ಬೋಧನಾ ಕಾರ್ಯವನ್ನು ಮುಂದಿನ ದಿನಗಳಲ್ಲಿ ಹೇಗೆ ನಡೆಸಬೇಕೆಂಬುದರ ಬಗ್ಗೆ ಸರ್ಕಾರಕ್ಕೂ ತಮ್ಮ ಸಲಹೆ ಸೂಚನೆಗಳನ್ನು (ಸಾಮಾಜಿಕ ಜಾಲತಾಣದ ಮೂಲಕ ತಮ್ಮ ಪ್ರಮುಖ ಕಾರ್ಯಕರ್ತರ ಸಲಹೆ ಸೂಚನೆಯನ್ನು ಪಡೆದುಕೊಂಡು) ಸಹ ನೀಡುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರೂ ಸಹ ತಮ್ಮ ತನು-ಮನ-ಧನದಿಂದ ಸೇವಾ ಕಾರ್ಯದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ.

ಅನೇಕ ಜಿಲ್ಲೆಗಳಲ್ಲಿ ನಿರಾಶ್ರಿತರಿಗೆ, ಬಡವರಿಗೆ ಆಹಾರ, ದಿನಸಿ ಕಿಟ್, ಮೆಡಿಸಿನ್ ಕಿಟ್‌ಗಳನ್ನು ಹಾಗೂ ಆರ್ಥಿಕ ಸಹಾಯವನ್ನು ಸಹ ಮಾಡುತ್ತಿದ್ದಾರೆ. ಅನಕ್ಷರಸ್ಥರಿಗೆ ಈ ಮಹಾಮಾರಿ ಕೊರೋನಾದ ಹರಡುವಿಕೆ ಹಾಗೂ ರಕ್ಷಿಸಿಕೊಳ್ಳುವ ಉಪಾಯಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯವನ್ನೂ ಸಹ ಮಾಡುತ್ತಿದ್ದಾರೆ.

ರಕ್ತದ ಸಂಗ್ರಹ ಕಡಿಮೆಯಿದೆಯೆಂದು ವೈದ್ಯಕೀಯ ವಿಭಾಗದಿಂದ ಗೊತ್ತಾದಾಗ ಹುಬ್ಬಳ್ಳಿಯ ಕಾರ್ಯಕರ್ತರು ಸ್ವ ಇಚ್ಛೆಯಿಂದ ರಕ್ತದಾನವನ್ನು ಸಹ ಮಾಡಿ ಸಮಾಜ ಸೇವೆಯಲ್ಲಿ ತೊಡಗಿರುವುದು ಪ್ರಶಂಸನೀಯ.

ಶಿಕ್ಷಕರನ್ನು ಸಹ ಈ ವಿಪತ್ತಿನ ಸಮಯದಲ್ಲಿ ಕೊರೊನಾ ವಾರಿಯರ್ಸರನ್ನಾಗಿ ಸೇವಾ ಕ್ಷೇತ್ರದಲ್ಲಿ ಬಳಸಿಕೊಳ್ಳಲು ಸರ್ಕಾರ ತೀರ್ಮಾನಿಸಿದಾಗ ನಮ್ಮ ಶಿಕ್ಷಕರು ಸಹ ಸೇವಾ ಮನೋಭಾವದಿಂದ ತಮ್ಮ ತಮ್ಮ ಕರ್ತವ್ಯವನ್ನು ಸಂತೋಷದಿಂದ ಹಾಗೂ ಉತ್ಸಾಹದಿಂದ ನಿರ್ವಹಿಸುತ್ತಿದ್ದಾರೆ. ಶಿಕ್ಷಕ ಸಂಘಟನೆಯ ಕಾರ್ಯಕರ್ತರು ಸೇವಾ ಕ್ಷೇತ್ರದಲ್ಲಿ ನಿರತರಾಗಿರುವ ಶಿಕ್ಷಕರ ಕುಂದು ಕೊರತೆಗಳನ್ನು ಆಲಿಸಿ ಅವರಿಗೆ ತೊಂದರೆಗಳಾಗದಂತೆ ಸರ್ಕಾರಕ್ಕೂ ಸಹ ಮನವಿ ಸಲ್ಲಿಸಿದ್ದಾರೆ. ಅವರು ಸೇವಾಕ್ಷೇತ್ರದಲ್ಲಿ ಉತ್ಸಾಹದಿಂದ ಕಾರ್ಯ ಮಾಡಲು ಹುಬ್ಬಳ್ಳಿಯಲ್ಲಿ ಮತ್ತು ಅನೇಕ ಕಡೆ ಶಿಕ್ಷಕರಿಗೆ ಸ್ಯಾನಿಟೈಸರ್ ಮತ್ತು ಮಾಸ್ಕ್ ನೀಡುವುದರೊಂದಿಗೆ ಉತ್ಸಾಹ ತುಂಬಿದ್ದಾರೆ.


ಸರ್ಕಾರಿ ಶಿಕ್ಷಕರು ತಮ್ಮ ಒಂದು ದಿನದ ಸಂಬಳವನ್ನು ಸರ್ಕಾರಕ್ಕೆ ನೀಡಿರುವುದನ್ನು ಸಹ ನಾವು ಇಲ್ಲಿ ಸ್ಮರಿಸಬಹುದು. ಅನೇಕ ಕಾರ್ಯಕರ್ತರೂ ಸ್ವ ಇಚ್ಛೆಯಿಂದ ಪ್ರಧಾನಿ ಪರಿಹಾರ ನಿಧಿಗೆ ಹಣವನ್ನು ಸಂದಾಯ ಮಾಡಿದ್ದಾರೆ.

**ದೀನ ದಲಿತ ಸೇವೆಯೇ ಪರಮ ಆರಾಧನೆ**
**ಸಾಕು ಬರಿಯ ಬೋಧನೆ ಬೇಕು ಹಿರಿಯ ಸಾಧನೆ**
**ದಿಟದಿ ನಾವು ಅಳಿಸಬೇಕು ನುಡಿಯ ನಡೆಯ ಅಂತರ**
**ರಚಿಸಬೇಕು ನವಸಮಾಜ ಸರ್ವಾಂಗ ಸುಂದರ.**

ಸೇವೆಯಲ್ಲಿ ತೊಡಗಿರುವ ಹಾಗೂ ಸರ್ಕಾರದ ನಿಯಮಗಳನ್ನು ಚಾಚು ತಪ್ಪದೇ ಪಾಲಿಸುತ್ತಿರುವ ನಮ್ಮ ಕಾರ್ಯಕರ್ತರು ಅಭಿನಂದನಾರ್ಹರು.

ಸಂಪಾದಕ

# ಸೂಕ್ತಿ



ದೇವರು ಮನುಷ್ಯನಿಗೆ ಹೇಳುತ್ತಾನೆ:
ನಾನು ನಿನ್ನನ್ನು ಪ್ರೀತಿಸಬಲ್ಲೆ ; ಅಂತೆಯೇ ಶಿಕ್ಷಿಸುತ್ತೇನೆ. ನಿನ್ನನ್ನು ನೋವಿನಿಂದ ಗುಣ ಪಡಿಸಬಲ್ಲೆ ; ಅಂತೆಯೆ ನೋಯಿಸುತ್ತೇನೆ.

- ರವೀಂದ್ರನಾಥ ಠಾಕೂರ್

# ಪರಿವಿಡಿ


- ಡಾ. ಬಿ.ಆರ್. ಅಂಬೇಡ್ಕರ್: ದಲಿತನಾಯಕರಲ್ಲ ರಾಷ್ಟ್ರ ನಾಯಕರು 3
- ಅದ್ವೈತ ಅಮೃತಧಾರೆ 4
- ಬುದ್ಧಿಜೀವಿಗಳ ಕಣ್ತೆರೆಸಿದ ಕರೋನಾ 5
- ರಾಮಾಯಣ – ಮೌಲ್ಯಗಳ ಭಂಡಾರ 6
- ಯುಗಪ್ರವರ್ತಕ : ಬಸವಣ್ಣ 7
- ಪ್ರಪಂಚದ ಮೂರನೇಯ ಮಹಾಯುದ್ಧದ ಮಹಾಮಾರಿಯಾಗಿ ಕೊರೊನಾ 9
- ಶ್ರೀ ರಾಮಾನುಜಾಚಾರ್ಯ 11
- ಮೂಲ ಶಿಕ್ಷಣ : ಏನು-ಏಕೆ? 14
- ಚಿತ್ರಸುದ್ದಿಗಳು 15



# ಡಾ. ಬಿ. ಆರ್. ಅಂಬೇಡ್ಕರ್ ದಲಿತನಾಯಕರಲ್ಲ, ರಾಷ್ಟ್ರ ನಾಯಕರು

## ಅಂಬೇಡ್ಕರ್‌ರವರ ಜನ್ಮದಿನದ ನಿಮಿತ್ತ ವಿಶೇಷ ಲೇಖನ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಏಪ್ರಿಲ್ 14. ಪ್ರತಿವರ್ಷ ಈ ದಿನ ಅವರ ಜನ್ಮಜಯಂತಿಯನ್ನು ಸಾರ್ವಜನಿಕವಾಗಿಯೂ ಸರ್ಕಾರಿ ಮಟ್ಟದಲ್ಲೂ ಆಚರಿಸಲಾಗುತ್ತದೆ. ಈ ಸಮಯದಲ್ಲಿ ಭಾಷಣ ಮಾಡುವವರೆಲ್ಲಾ ಅವರನ್ನು ದಲಿತ ಕುಲದಲ್ಲಿ ಹುಟ್ಟಿದವರೆಂದೂ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಹೋರಾಟಗಾರನೆಂದೂ ಮತ್ತು ಸಂವಿಧಾನದ ರಚನಾಕಾರನೆಂದೂ ಹೊಗಳುತ್ತಾರೆ. ಇದು ಸತ್ಯವೂ ಹೌದು. ಆದರೆ ಇವಿಷ್ಟೇ ಹೇಳಿದರೆ ನಾವು ಅವರ ಪೂರ್ಣ ವ್ಯಕ್ತಿತ್ವಕ್ಕೆ ಮಾಡಿದ ಅಪಚಾರವಾಗುತ್ತದೆ.

ಅಸ್ಪೃಶ್ಯತೆ ನಮ್ಮ ಹಿಂದೂ ಸಮಾಜದಲ್ಲಿ ಯಾವುದೋ ಕಾಲಖಂಡದಲ್ಲಿ, ಹಿಂದೂ ಸಮಾಜಕ್ಕೆ ಶಾಪವಾಗಿ ಹುಟ್ಟಿಕೊಂಡ ಆಚರಣೆ. ಈ ಆಚರಣೆಯ ವಿರುದ್ಧ ಕಾಲಕಾಲಕ್ಕೆ ಅನೇಕ ಸಂತರು, ಸಮಾಜ ಸುಧಾರಕರು ದನಿ ಎತ್ತಿದ್ದಾರೆ. ಇಷ್ಟಾದರೂ ಅಂಬೇಡ್ಕರ್ ಅವರ ಜನನ ಮತ್ತು ಜೀವಿತಕಾಲದಲ್ಲಿ ಅದರ ತೀವ್ರತೆ ಕಡಿಮೆಯೇನೂ ಆಗಿರಲಿಲ್ಲ. ಅಸ್ಪೃಶ್ಯತೆಯ ಆಚರಣೆ ನಮ್ಮ ಸಾಮಾಜಿಕ ಜೀವನದ ಅಭಿನ್ನ ಭಾಗವಾಗಿದ್ದ ದಿನಗಳಲ್ಲಿ ಅವರ ಜನನ. ಆ ಜನಾಂಗಕ್ಕೆ ಊರೊಳಗೆ ಮನೆ ಇರುತ್ತಿರಲಿಲ್ಲ. ಊರಾಚೆಯ ಕೊಳಕು ಕೊಂಪೆಯಲ್ಲಿ ಗಾಳಿ ಬೆಳಕು ತೂರದ ಮುರುಕು ಗುಡಿಸಿನಲ್ಲಿ ಅವರ ವಾಸ. ಸವರ್ಣೀಯರು ಅವರ ನೆರಳನ್ನೂ ಸಹಿಸುತ್ತಿರಲಿಲ್ಲ. ಸಾರ್ವಜನಿಕರು ಉಪಯೋಗಿಸುತ್ತಿದ್ದ ನೀರಿನ ಆಸರೆ ಅವರಿಗೆ ನಿಷಿದ್ಧ. ಕಷ್ಟಪಟ್ಟು ದೊರಕಿಸಿಕೊಳ್ಳುತ್ತಿದ್ದ ಕೊಳಚೆ ನೀರೇ ಜೀವನಾಧಾರ ಇನ್ನು ಅವರಿಗೆ ಕ್ಷೌರಿಕ, ದೋಬಿ ಅವರ ಅಂಗಡಿಗೆ ಪ್ರವೇಶವೇ ಇಲ್ಲ. ಅವರು ಆಚರಿಸುತ್ತಿದ್ದುದು ಹಿಂದು ಹಬ್ಬಗಳನ್ನೆ. ಪೂಜಿಸುತ್ತಿದ್ದುದು ಹಿಂದು ದೇವರುಗಳನ್ನು. ಆದರೂ ಅವರಿಗೆ ದೇವಸ್ಥಾನಗಳಿಗೆ ಪ್ರವೇಶವಿಲ್ಲ ! ಅನ್ಯಮತೀಯರನ್ನು ಅಪ್ಪಿಕೊಳ್ಳುತ್ತಿದ್ದ ಸವರ್ಣೀಯರು, ತಮ್ಮದೇ ಸಮಾಜದ ಒಂದು ಭಾಗವನ್ನು ದೂರವಿಟ್ಟಿದ್ದರು.

ಇನ್ನು ಅವರ ಪಾಲಿಗೆ ಶಿಕ್ಷಣವಂತೂ ದೂರ ಉಳಿಯಿತು. ರಸ್ತೆ ಗುಡಿಸುವುದು, ಚಪ್ಪಲಿ ಹೊಲಿಯುವುದು, ಮಲ ಹೊರುವುದು. ಈ ಕೆಲಸಗಳೇ ಅವರ ಜೀವನ ನಿರ್ವಹಣೆಯ ಮಾರ್ಗ. ಹಾಸಲು, ಹೊದೆಯಲು ಸಾಕಷ್ಟು ಬಡತನ. ನೆತ್ತಿಯ ಮೇಲೆ ಸಾಲದ ತೂಗುಗತ್ತಿ. ತಮ್ಮ ಮುಂದಿನ ಪೀಳಿಗೆಗೆ ಅವರು ಬಿಟ್ಟು ಹೋಗುತ್ತಿದ್ದ ಆಸ್ತಿಯೂ ಸಾಲದ ಹೊರೆಯೇ ! ಅಂಬೇಡ್ಕರ್ ಹುಟ್ಟಿದಾಗ ಇದ್ದ ಸಮಾಜದ ನೀತಿ ಇದು.

ಹೀಗೆ ಬದುಕಿ ಬಾಳುತ್ತಿದ್ದ ಜನಾಂಗವನ್ನು ಮೇಲೆತ್ತುವ ಸಂಕಲ್ಪ ಮಾಡಿ ಅದಕ್ಕಾಗಿ ಅಪಾರವಾಗಿ ಪರಿಶ್ರಮಿಸಿದವರು ಬಾಬಾಸಾಹೇಬ ಅಂಬೇಡ್ಕರ್ ಅವರು. ಇಂಗ್ಲೆಂಡಿಗೆ ಹೋಗಿ ಬಾರಿಸ್ಟರ್ ಪದವಿ ಗಳಿಸಿ ಭಾರತಕ್ಕೆ ಬಂದ ನಂತರ ಸ್ವರಾಜ್ಯ ಪ್ರಾಪ್ತಿಗಾಗಿ ನಡೆಯುತ್ತಿದ್ದ ಅನೇಕ ಪ್ರಕ್ರಿಯೆಗಳಲ್ಲಿ ಅವರ ಸಕ್ರಿಯ ಪಾತ್ರವಿತ್ತು. ದೇಶ ಹಿತ ಅವರ ಮೊದಲ ಆದ್ಯತೆಯಾಗಿತ್ತು. ದುಂಡು ಮೇಜಿನ ಪರಿಷತ್ತಿಗೆ ಹೋದಾಗಲೂ ದಲಿತರಿಗೆ ನ್ಯಾಯ ಸಿಗುವ ಮಾತನಾಡಿದರೂ, ದೇಶದ ಹಿತ ಅವರ ಮನಸ್ಸಿನಲ್ಲಿ ಪ್ರಧಾನವಾಗಿತ್ತು. "ನನ್ನ ಹೃದಯದಲ್ಲಿ ಯಾವತ್ತಿಗೂ ಪ್ರಧಾನವಾಗಿರುವುದು ದೇಶದ ಹಿತವೇ. ದುಂಡು ಮೇಜಿನ ಪರಿಷತ್ತಿನಲ್ಲಿ ದೇಶದ ದೃಷ್ಟಿಯಿಂದ ನಾನು ಗಾಂಧಿಯವರಿಗಿಂತಲೂ 200 ಮೈಲು ಮುಂದೆ ಇದ್ದೆ" ಎಂದು ಅವರು ಹೇಳಿದ್ದುಂಟು.


ಆ ದಿನಗಳಲ್ಲಿ ಮುಂಬೈ ಭಾರತದ ಕೈಗಾರಿಕಾ ಕೇಂದ್ರವಾಗಿತ್ತು. ಆ ಕೈಗಾರಿಕೆಗಳಲ್ಲಿ ಕೆಲಸ ಮಾಡತ್ತಿದ್ದ ಬಡ ಕಾರ್ಮಿಕರೆಲ್ಲಾ ಅಂಬೇಡ್ಕರರ ಅನುಯಾಯಿಗಳೇ. ಬಾಲ್ಯದಿಂದಲೂ ಶೋಷಿತ, ಪೀಡಿತರ ನಡುವೆಯೇ ಬೆಳೆದ ಅವರಿಗೆ ಕಾರ್ಮಿಕರ ಕಷ್ಟ ನೋವುಗಳ ಅರಿವು ಸಂಪೂರ್ಣವಾಗಿದ್ದಿತು. ಆದರೆ ಕಾರ್ಮಿಕರ, ಶ್ರಮಿಕರ ಉದ್ಧಾರ ಮಾಡುವೆವು ಎಂದು ಹೊರಟ ಕಮ್ಯೂನಿಸ್ಟ್ ಸಿದ್ಧಾಂತದ ಬಗ್ಗೆ ಅವರಿಗೆ ತಿಲಮಾತ್ರವೂ ವಿಶ್ವಾಸವಿರಲಿಲ್ಲ. ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಪ್ರಾರಂಭವಾದದ್ದು 1920 ರ ದಶಕದಲ್ಲಿ. ಮಾರ್ಕ್ಸ್ ವಾದವನ್ನು ಆಳವಾಗಿ ಅಧ್ಯಯನ ಮಾಡಿದ್ದ ಅವರ ಕುಶಾಗ್ರ ಬುದ್ಧಿಗೆ ಅದರ ಪೊಳ್ಳುತನದ ಸಂಪೂರ್ಣ ಅರಿವಿತ್ತು. ತಮ್ಮ ರಾಜಕೀಯ ದುರುದ್ದೇಶಕ್ಕಾಗಿ ಬಡ ಕಾರ್ಮಿಕರನ್ನು ಬಲಿಪಶುವಾಗಿ ಮಾಡುವ ಕಮ್ಯುನಿಸ್ಟರ ಒಳಸಂಚು ಮತ್ತದರ ದೂರಗಾಮಿ ಪರಿಣಾಮವನ್ನು ಅವರು ಸರಿಯಾಗಿ ಗುರುತಿಸಿದ್ದರು. "ಕಮ್ಯುನಿಸ್ಟರಿಗೆ ತಾನೊಬ್ಬ ಬದ್ಧ ವೈರಿ" ಎಂದು ತಮ್ಮ ಬಗ್ಗೆ ಅವರೇ ಹೇಳಿಕೊಂಡಿರುವುದೂ ಉಂಟು. 1954 ರ ಆಗಸ್ಟ್ 26 ರಂದು ರಾಜ್ಯಸಭೆಯಲ್ಲಿ ಮಾತನಾಡುತ್ತಾ 'ಕಮ್ಯುನಿಸಂ ಎನ್ನುವುದು ಒಂದು ಕಾಳ್ಗಿಚ್ಚಿನಂತೆ. ನಾಲ್ಕೂ ಸುತ್ತಿನಿಂದ ಆವರಿಸುತ್ತಾ ಎಲ್ಲವನ್ನೂ ಭಸ್ಮ ಮಾಡುವುದೇ ಅದರ ಕಾರ್ಯ' ಎಂದಿದ್ದರು. ಪರಕೀಯ ವಿಚಾರಧಾರೆಯನ್ನು ಹಿಡಿದು ಹೊರಟಿರುವ ಕಮ್ಯುನಿಸ್ಟರಿಂದ ಎಂದೂ ಭಾರತದ ಉದ್ಧಾರವಾಗುವುದಿಲ್ಲ ಎಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು.

ಪುಟ 8 ಕ್ಕೆ ➢

## ಮೂಢನಂಬಿಕೆಯಲ್ಲ ಇದು ಮೂಲ ನಂಬಿಕೆ

# ಅದ್ವೈತ ಅಮೃತಧಾರೆ

■ ಶ್ರೀಮತಿ ಸುನೀತಾ ಗಂಗಾಧರ್
ರಾಮನಗರ



'ರತ್ನಗರ್ಭಾ ವಸುಂಧರಾ' ತಾಯಿ ಭಾರತೀಯ ಗರ್ಭದಲ್ಲಿ ಅಸಂಖ್ಯ ಅಮೂಲ್ಯ ರತ್ನತ್ರಯರು ಜನ್ಮಿಸಿ ಈ ನೆಲದ ಸಂಸ್ಕೃತಿ ಹಾಗೂ ಜನರ ಜೀವನ ಮಟ್ಟವನ್ನು ಶ್ರೀಮಂತಗೊಳಿಸಿ ಅಜರಾಮರರಾಗಿದ್ದಾರೆ. ಅಂತಹ ಮಹಾಮಹಿಮರಲ್ಲಿ ಆದಿಗುರು ಶ್ರೀ ಶಂಕರಾಚಾರ್ಯರು ಒಬ್ಬರು.

2020 ಏಪ್ರಿಲ್ 28 ರಂದು ಯತಿಕುಲಶ್ರೇಷ್ಠರಾದ ಶ್ರೀ ಶಂಕರಾಚಾರ್ಯರ ಜಯಂತಿ. ಶ್ರೀ ಗುರುಗಳು ಸನಾತನ ಧರ್ಮರಕ್ಷಣೆಗೆ ನೀಡಿದ ಕೊಡುಗೆಯನ್ನು ಸ್ಮರಿಸಿ ಆ ಧ್ಯೇಯ ನಿಷ್ಠೆಗಳನ್ನು ನಮ್ಮಲ್ಲಿ ಅನುಷ್ಠಾನಗೊಳಿಸಿಕೊಳ್ಳಲು ಪ್ರಯತ್ನಿಸಿದರೆ ಮುಂದಿನ ಪೀಳಿಗೆಯು ಸಮಾಜದ ಪ್ರಥಮ ದರ್ಜೆಯ ಪ್ರಜೆಗಳಾಗಿ ರೂಪುಗೊಳ್ಳುವುದರ ಜೊತೆಗೆ ಜ್ಞಾನ ಮತ್ತು ಮಾನವೀಯ ಮೌಲ್ಯ ವಿಕಾಸ ಹೊಂದಿ ಸೌಹಾರ್ದ ಸಮಾಜ ನಿರ್ಮಾಣದ ಮೂಲಕ ಈ ಜಯಂತಿ ಆಚರಣೆಗಳ ಧ್ಯೇಯ ಈಡೇರಿದಂತಾಗುವುದು.

ಶ್ರೀ ಶಂಕರರು ಕ್ರಿ.ಶ. 788 ರ ವಿಭವನಾಮ ಸಂವತ್ಸರ ವೈಶಾಖ ಮಾಸ ಶುಕ್ಲಪಕ್ಷದ ಪಂಚಮಿಯಂದು ಕೇರಳದ ಪೂರ್ಣಾನದಿ ದಡದ ಮೇಲಿರುವ 'ಕಾಲಡಿ' ಗ್ರಾಮದಲ್ಲಿ ಶ್ರೀ ಶಿವಗುರು–ಆರ್ಯಾಂಬೆ ದಂಪತಿಗಳ ಸುಪುತ್ರನಾಗಿ ಜನಿಸಿದರು. 32 ವಯಸ್ಸಿನ ಅತೀ ಚಿಕ್ಕ ಜೀವಿತಾವಧಿಯಲ್ಲಿ ಬಾಲ್ಯದಿಂದಲೇ ಸಾರ್ಥಕ ಬದುಕನ್ನು ಬಾಳಿದ ಶ್ರೀ ಶಂಕರರ ಜೀವನದ ಕೆಲ ಪ್ರಮುಖ ಘಟ್ಟಗಳತ್ತ ಒಂದು ಕಿರು ನೋಟ.

ಮೂರನೇಯ ವಯಸ್ಸಿನಲ್ಲಿ ಅಸಂಖ್ಯಾತ ಭಾಷಾ ಪಾಂಡಿತ್ಯ ಗಳಿಸಿದ್ದ ಶಂಕರರು ಈ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡರು. ದುಃಖಿತಪ್ತ ತಾಯಿಗೆ ಸಾಂತ್ವಾನ ನೀಡಲು ಚಿಕ್ಕ ಬಾಲಕನಾದ ಶಂಕರ ನುಡಿದ ನುಡಿಗಳಿವು – 'ಅಮ್ಮಾ, ಹುಟ್ಟು ಸಾವು ಎರಡೂ ಪ್ರಾಪಂಚಿಕ ಮಾಯೆ. ಲೋಕದ ಎಲ್ಲ ಪ್ರಾಣಿಗಳಿಗೂ ಮರಣ ತಪ್ಪದು. ಜನನ–ಮರಣ, ಸುಖ–ದುಃಖ, ಲಾಭ–ನಷ್ಟ ಇವುಗಳನ್ನು ಬಯಸದೇ ಒದಗಿರುವುದನ್ನು ಅನುಭವಿಸುವುದೇ ಜೀವನ ಸತ್ಯ'ವೆಂದು ಹೇಳಿದಾಗ ನೆರೆದ ಬಂಧು–ವರ್ಗದವರೆಲ್ಲಾ ಮಣ್ಣಾಟವಾಡಬೇಕಾದ ವಯಸ್ಸಿನ ಬಾಲನ ಪ್ರಬುದ್ಧತೆಗೆ ವಿಸ್ಮಿತರಾದರು. ತಾವು ಸಹ ತಾಯಿಗೆ ನೀಡಿದ ವಚನ ಪಾಲಿಸಿ ನುಡಿದಂತೆ ನಡೆದು ತೋರಿದರು. ಯತಿಧರ್ಮಕ್ಕೆ ವಿರುದ್ಧವಾದ ಅಪರತರ್ಮೇ ನಿರ್ವಹಣೆಯನ್ನು ಧಿಕ್ಕರಿಸಿ ತಾಯಿಯ ಆತ್ಮಸಂತೋಷದಂತೆ ಆಕೆಯ ಅಂತಿಮ ಸಂಸ್ಕಾರದ ಎಲ್ಲ ಜವಾಬ್ದಾರಿ ನಿರ್ವಹಿಸಿ "ತಾಯಿಯೇ ಪರದೈವ". ಡಂಭಾಚಾರದ ಅನುಸರಣೆ ಸಲ್ಲದು ಎಂಬ ಸಂದೇಶವಿತ್ತರು. ಹಿಂದೂ ಧರ್ಮದ ವಿರೋಧಿಗಳ ಅವೈದಿಕ ಕರ್ಮಠರಿಗೆ ವೇದಗಳ ಮೂಲಸಾರವನ್ನು ಸರಳಿಕರಿಸಿ ಮೂಲ ತತ್ವವನ್ನು ಮನಗಾಣಿಸಲು 'ಅದ್ವೈತ ಮತ' ವನ್ನು ಸಂಸ್ಥಾಪಿಸಿದರು. ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಸೌರ, ಸ್ಕಂದ ಮತಗಳನ್ನು ಒಗ್ಗೂಡಿಸಿ 'ಷಣ್ಮತ ಪ್ರತಿಷ್ಠಾಪಕರಾದರು. 16 ನೇ ವಯಸ್ಸಿನಲ್ಲೇ ವೇದ, ಶಿಕ್ಷೆ, ಛಂದಸ್ಸು, ವ್ಯಾಕರಣ, ನಿರುಕ್ತ, ಕಲ್ಪ, ಜ್ಯೋತಿಷ್ಯಗಳೆಂಬ ವೇದಾಂಗಗಳಲ್ಲಿ ಪಾರಂಗತರಾಗಿ 'ಸಾಂಖ್ಯಸೂತ್ರ', 'ಯಾಗಸೂತ್ರ', 'ಬ್ರಹ್ಮಸೂತ್ರ' ಗಳಿಗೆ ಭಾಷ್ಯವನ್ನು ರಚಿಸಿದರು. ಭಗವದ್ಗೀತೆ, ಈಶ, ಪಾರತೇಯ, ಕಠೋಪ, ಕೇನೋ, ತೈತ್ತಿರೀಯ, ಪ್ರಶ್ನ, ಮಾಂಡೂಕ್ಯ, ಶ್ವೇತಾಶ್ವತರ, ಮುಂಡಕೋಪನಿಷತ್‌ಗಳೆಂಬ ಒಂಭತ್ತು ಮೂಲ ಉಪನಿಷತ್ತುಗಳ ಮೇಲೆ ಭಾಷ್ಯವನ್ನು ಬರೆದಿರುವರು. "ಏಕಾತ್ಮ"ವೆಂದು ವೇದಗಳಿಂದ ಸ್ತುತಿಸಲ್ಪಡುವ ಅಭಿನ್ನವಾದ ಪರಬ್ರಹ್ಮ ವಸ್ತುವಿನ ಅದ್ವೈತ ಭಾವವನ್ನು ಶಂಕರರು ಬೋಧಿಸಿದರು. ಅತ್ಯಂತ ಸರಳವಾಗಿ ಅ–ದ್ವಿತ 'ಎರಡು ಅಲ್ಲದ್ದು' (ಆತ್ಮ+ಪರಮಾತ್ಮ) ಒಂದೇ ಎಂಬುದೇ "ಏಕಾತ್ಮ" ಹಾಗೂ 'ಏಕಮೇವದ್ವಿತೀಯಂ ಬ್ರಹ್ಮ' ಎಂಬ ವೇದದ ಸಾರವೇ 'ಅದ್ವೈತ ಮತ'ದ ತತ್ವವಾಗಿದೆ. 8ನೇ ಶತಮಾನದಲ್ಲಿ ಹಲವು ಮತಗಳ ದಾಳಿಯಿಂದಾಗಿ ಅವನತಿಯತ್ತ ಸಾಗಿದ್ದ ವೈದಿಕ ಮತವನ್ನು ಸರಳ ವಿಚಾರಧಾರೆ ಮೂಲಕ ಜನರಿಗೆ ತಲುಪಿಸಲು ದೇಶದುದ್ದಗಲಕ್ಕೂ ಕಾಲ್ನಡಿಗೆಯಲ್ಲಿ 3 ಬಾರಿ ಸಂಚರಿಸಿ ಹಲವಾರು ಪಂಥಾಹ್ವಾನ ಸ್ವೀಕರಿಸಿ 'ಪರಬ್ರಹ್ಮ' ಒಂದೇ ಜಗದಲ್ಲಿ ಚರ–ಅಚರವೆನಿಸೋ ನಾನಾವಿಧ ವಸ್ತುಗಳ ರೂಪವನ್ನು ತಾಳಿ ಬೇರೆ–ಬೇರೆಯಾಗಿ ಕಾಣುತ್ತಿರುವುದನ್ನು ಮನದಟ್ಟು ಮಾಡಿಸಿ ಶಿಷ್ಯ ಸಮೂಹವನ್ನು ಗಳಿಸುತ್ತ ಉತ್ತರದ ಮೇರು ಸದೃಶ 'ಸರ್ವಜ್ಞ' ಪೀಠವನ್ನೇರಿದ ಶ್ರೀ ಶಂಕರರು ಶೃಂಗಗಿರಿ ಕ್ಷೇತ್ರ, ದ್ವಾರಕಾಪುರ, ಜಗನ್ನಾಥ, ಬದರಿಕಾಶ್ರಮದಲ್ಲಿ 4 ಅಮ್ನಾಯ ಪೀಠಗಳನ್ನು ಸ್ಥಾಪಿಸಿ ಸುರೇಶ್ವರಾಚಾರ್ಯ, ಪದ್ಮಪಾದಾಚಾರ್ಯ, ಹಸ್ತಾಮಲಕ, ಆನಂದಗಿರಿಯಂತಹ ಮೇಧಾವಿ ಶಿಷ್ಯರಿಗೆ ಪೀಠ ವಹಿಸಿ ಧರ್ಮಸಂಸ್ಥಾಪನಾ ಕಾರ್ಯ ಸಾಂಗವಾಗಿ ನೆರವೇರುವಂತೆ ನೇಮಿಸಿದರು. ಮೇಲಿನ ಎಲ್ಲದಕ್ಕೂ ಕಾರಣವಾದ ಒಂದು ಘಟನೆ ಹೇಳಲೇಬೇಕು. ಅದೊಂದು ದಿನ ಶ್ರೀ ಶಂಕರರು ತಮ್ಮ ಶಿಷ್ಯಂದಿರೊಂದಿಗೆ ದೇವಗಂಗಾನದೀ ತೀರದಲ್ಲಿ ಯತಿಧರ್ಮೋಕ್ತಕಾರ್ಯಗಳನ್ನಾಚರಿಸಿ ಬರುತ್ತಿರಲು ಮಾರ್ಗ ಮಧ್ಯೆ ನಾಯಿಗಳನ್ನು ಜೊತೆಗೂಡಿಸಿಕೊಂಡು ಒಬ್ಬ ಚಾಂಡಾಲ ಇವರ ಸಮೀಪಕ್ಕೆ ಬರುತ್ತಿದ್ದನು. ಆಗ ಯತಿಶ್ರೇಷ್ಠನು ಆತನನ್ನು ನೋಡಿ 'ದೂರ ನಡೆ', 'ನಡೆ ದೂರ' ಎಂದು ಕೂಗಿದರು. ಆ ಚಾಂಡಾಲ ವೇಷಧಾರಿಯು ಶಂಕರ ಯತಿ ಕುರಿತು ಹೀಗೆ ಹೇಳಿದ – ಎಲೈ ಸನ್ಯಾಸಿ ಶ್ರೇಷ್ಠನೇ ನಿನ್ನ ಮಾತುಗಳ ಅರ್ಥವೇನು? ಯಾರನ್ನು ಕುರಿತು

ಪುಟ 8 ಕ್ಕೆ ➢

# ಬುದ್ಧಿಜೀವಿಗಳ ಕಣ್ತೆರೆಸಿದ ಕರೋನಾ


**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**




ಮಹಾಕವಿ ಕಾಳಿದಾಸ ತನ್ನದೊಂದು ನಾಟಕದಲ್ಲಿ ಹೇಳುವ ಶ್ಲೋಕ ಈ ಕೆಳಗಿನಂತಿದೆ.

**ಪುರಾಣ ಮಿತ್ಯೇವ ನ ಸಾಧು ಸರ್ವಂ**
**ನ ಚಾಪಿ ಕಾವ್ಯಂ ನವಮಿತ್ಯವದ್ಯಂ ।**
**ಸಂತಃ ಪರೀಕ್ಷಾ ನ್ಯತರದ್ ಭಜಂತೇ**
**ಮೂಢಃ ಪರಪ್ರತ್ಯಯನೇಯ ಬುದ್ಧಿಃ ॥**

*ಇದರ ಭಾವಾರ್ಥ; ಹಳತು ಎಂಬ ಮಾತ್ರಕ್ಕೆ ಎಲ್ಲವೂ ಉತ್ತಮವಾದುದಲ್ಲ, ಹೊಸತು ಎಂದ ಮಾತ್ರಕ್ಕೆ ತಿರಸ್ಕರಿಸಬೇಕೆಂದೂ ಅಲ್ಲ. ಸಜ್ಜನರೂ, ಜ್ಞಾನಿಗಳೂ ಪ್ರಾಚೀನ ಮತ್ತು ನವೀನ ಎರಡೂ ಸಂಗತಿಗಳನ್ನು ತುಲನೆ ಮಾಡಿ, ಸಾಕಷ್ಟು ಪರೀಕ್ಷಿಸಿ ಒಳ್ಳೆಯದನ್ನು ಮಾತ್ರ ಸ್ವೀಕರಿಸುತ್ತಾರೆ. ಆದರೆ ಅಜ್ಞಾನಿಗಳು, ಮೂರ್ಖರೂ ಅನ್ಯರು ಹೇಳಿದ್ದನ್ನು ಅನುಸರಿಸುತ್ತಾರೆ. ಅವರಲ್ಲಿ ಸ್ವಂತಿಕೆ ಎಂಬುದಿರುವುದಿಲ್ಲ ಎಂಬುದು ತಾತ್ಪರ್ಯ. ಯಾವುದೇ ಪ್ರಾಚೀನ ಹಾಗೂ ಆಧುನಿಕ ಸಂಗತಿಗಳನ್ನು ವಿಶ್ಲೇಷಣೆ ಮಾಡಿ, ಯಾವುದು ಕುಟುಂಬಕ್ಕೂ, ಸಮಾಜಕ್ಕೂ ಒಳಿತಾಗುವುದೋ ಅದನ್ನೇ ನಾವು ಸ್ವೀಕರಿಸಬೇಕಾಗುತ್ತದೆ.*

ಈ ಪೂರ್ವ ಪೀಠಿಕೆಯನ್ನು ಏತಕ್ಕಾಗಿ ಬರೆಯ ಬೇಕಾಯಿತೆಂದರೆ, ಕಳೆದ ಹಲವು ದಶಕಗಳಿಂದ ಈ ದೇಶದಲ್ಲಿ ಅದು ಒಳ್ಳೆಯ ಸಂಗತಿ ಇರಲಿ ಅಥವಾ ಕೆಟ್ಟದಿರಲಿ, ಎಲ್ಲವನ್ನೂ ಸಾರಾಸಗಟಾಗಿ ನಿಂದಿಸುವ, ತಿರಸ್ಕರಿಸುವ ಒಂದು ವರ್ಗ ಸೃಷ್ಟಿಯಾಗಿದೆ. ಇವರನ್ನು ಸಾಮಾನ್ಯ ಜನ 'ಬುದ್ಧಿಜೀವಿ'ಗಳು ಎಂದು ಕರೆಯುತ್ತಾರೆ. ಇವರ ದೃಷ್ಟಿ ಎಲ್ಲವು ಪಶ್ಚಿಮದ ಕಡೆಗೆ. ತಮ್ಮನ್ನು ತಾವು ಆಧುನಿಕರು ಎಂದು ಕರೆದುಕೊಳ್ಳುವ ಈ ಜನ ಹಿಂದೂಸ್ಥಾನದ ಮಣ್ಣಿನಲ್ಲಿ ಹುಟ್ಟಿದ ಎಲ್ಲ ವಿಷಯಗಳನ್ನು ಪಾಶ್ಚಾತ್ಯ ತಕ್ಕಡಿಯಲ್ಲಿ ತೂಗಿ ನೋಡುತ್ತಾರೆ. ಇಲ್ಲಿನ ಪದ್ಧತಿಗಳನ್ನು ಅನಾಗರೀಕವೆಂದು ತುಚ್ಛವಾಗಿ ಕಾಣುತ್ತಾರೆ. ಈ ಸಂಗತಿಗಳಿಗೆ ಜಾತಿಯ ವೇಷವನ್ನು ಬಳಿಯುತ್ತಾರೆ. ಹಿಂದು ಪದ್ಧತಿಗಳೆಂದರೆ ಅದು ಜಾತೀಯ, ಸಂಕುಚಿತ, ಇಂದಿನ ಕಾಲಕ್ಕೆ ಹೊಂದಿಕೊಳ್ಳದ್ದು ಎಂದು ಪುಸ್ತಕಗಳನ್ನು, ಲೇಖನಗಳನ್ನು, ಕವಿತೆಗಳನ್ನು ಬರೆಯುತ್ತಾರೆ. ಭಾಷಣಗಳನ್ನು ಬಿಗಿಯುತ್ತಾರೆ. ರಾಮಾಯಣ, ಮಹಾಭಾರತ ಎಲ್ಲವೂ ಸುಳ್ಳಿನ ಕಂತೆ ಎಂದು ಸಾರುವವರೂ ಇದ್ದಾರೆ. ಇವರೆಲ್ಲಾ ಸಾಮಾನ್ಯ ಜನರಲ್ಲ, ವಿಶ್ವವಿದ್ಯಾಲಯಗಳಲ್ಲಿ ಬೋಧಿಸುತ್ತಾ ಹಲವು ಪೀಳಿಗೆಯ ಯುವಕರನ್ನು ದಾರಿ ತಪ್ಪಿಸಿದವರು. ಇವರಿಗೆಲ್ಲಾ ಮೆಕಾಲೆ ತಂದೆ, ಮಾರ್ಕ್ಸ್ ತಾಯಿ. ಅವರು ಹೇಳಿದ್ದೆಲ್ಲಾ ವೇದವಾಕ್ಯ. ಇಲ್ಲಿನ ಪ್ರಜ್ಞಾವಂತರು ಹೇಳಿದರೆ ಅದು ಅಸಭ್ಯ.

ಪ್ರಧಾನಿ, ವಿಶ್ವಸಂಸ್ಥೆಯಲ್ಲಿ ಯೋಗದ ಬಗ್ಗೆ ಹೇಳಿ ಅದನ್ನು ಅಂತರ್ರಾಷ್ಟ್ರೀಯಗೊಳಿಸಿದರೆ ಅದು ಹಿಂದೂ ಹಿತಾಸಕ್ತಿ. ನಾವು ಕೈಮುಗಿದು ನಮಸ್ಕರಿಸಿದರೆ ಅದಕ್ಕೆ ತಿರಸ್ಕಾರ. ನಾವು ನದಿ, ಗಿಡ–ಮರಗಳನ್ನು ಪೂಜಿಸಿದರೆ, ನಾಗರ ಪಂಚಮಿ ಮಾಡಿದರೆ ಅದು ಪ್ರಕೃತಿಯ ಆರಾಧನೆಯಲ್ಲ, ಅನಾಗರೀಕತೆ !




ಈಗ ಬಂತು ನೋಡಿ ಕರೋನ. ಪ್ರಾಣದ ಭೀತಿ, ಕೈಕುಲುಕುವುದು ಬೇಡ, ಹಗ್ಗಿಂಗ್ ಬೇಡ ಎಂದು ಪಾಶ್ಚಾತ್ಯರು ಹೇಳಿ ಹಿಂದೂ ಪದ್ಧತಿಯಾದ ನಮಸ್ಕಾರವನ್ನು ಅಳವಡಿಸಿಕೊಳ್ಳುತ್ತಿದ್ದಾರಲ್ಲಾ, ಈಗದಕ್ಕೆ ವಿಶ್ವ ಮಾನ್ಯತೆ ! ಅದನ್ನು ನಮ್ಮ ಸೆಕ್ಯುಲರ್‌ವಾದಿಗಳೂ ಒಪ್ಪಿಕೊಳ್ಳುತ್ತಿದ್ದಾರೆ. ಅಡುಗೆಮನೆಯಲ್ಲಿ ಏನಿರುತ್ತದೆ ಎಂದು ತಿಳಿಯದವರು ಮೆಣಸು, ಜೀರಿಗೆ, ಕೊತ್ತಂಬರಿ, ಶುಂಠಿ ಡಬ್ಬಿ ಹುಡುಕುತ್ತಿದ್ದಾರೆ. ತುಳಸೀ ಪೂಜೆ ಮಾಡದವರೂ ತುಳಸಿ ದಳದ ಕಷಾಯ ಕುಡಿಯುತ್ತಿದ್ದಾರೆ. ನಮ್ಮ ಅಡುಗೆಯ ಸಾಂಬಾರ ಪದಾರ್ಥಗಳೆಲ್ಲಾ ಕೆಮ್ಮು, ದಮ್ಮು, ನೆಗಡಿಗೆ ಔಷಧಿ ಎಂದು ಈಗ ತಿಳಿಯುತ್ತಿದೆ.

ನಮ್ಮ ಯೋಗಾಭ್ಯಾಸ, ಪ್ರಾಣಾಯಾಮಗಳು ನಮ್ಮ ಶರೀರವನ್ನು ಸ್ವಸ್ಥಗೊಳಿಸುವ ಸಾಧನ ಎಂಬ ಅರಿವು ಈಗ ಮೂಡುತ್ತಿದೆ. ವಿದೇಶೀಯರು ಯೋಗ ಕಲಿತ ನಂತರ ನಾವು ಜಾಗೃತರಾಗುತ್ತಿದ್ದೇವೆ. ಇನ್ನು ನಮ್ಮ ಆಹಾರ ಪದ್ಧತಿ ಅತ್ಯಂತ ವೈಜ್ಞಾನಿಕ ಎಂಬ ಜ್ಞಾನೋದಯವಾಗುತ್ತಿದೆ. ಅದೂ, ನೆಲದ ಮೇಲೆ ಚಲಿಸುವುದೆಲ್ಲ ತಿನ್ನಲಿಕ್ಕೇ ಇರುವುದು ಎಂದು ಭಾವಿಸಿರುವ ಜನರಿಂದ ಕರೋನ ಹಬ್ಬಿದ ನಂತರ !

ಆಯುರ್ವೇದ ಹಿಂದುಗಳದ್ದೆಂದು ಜರಿದ ಜನ ಅದರ ಬೆನ್ನು ಬಿದ್ದಿದ್ದಾರೆ. ಮಡಿ ಮಡಿ ಮನುವಾದಿಗಳು ಎಂದು ಬೈದವರೂ ಕೈ ತೊಳೆಯಿರಿ, ಕಾಲ್ತೊಳೆದು ಒಳಗೆ ಬನ್ನಿ, ಹೊರಗಡೆಗೆ ಹಾಕಿಕೊಂಡು ಹೋದ ಬಟ್ಟೆಯನ್ನು ಮನೆಯಲ್ಲಿ ಮಡಿ ಮಾಡದೆ ಹಾಕಿಕೊಳ್ಳಬೇಡಿ ಎಂದು ಶಂಖ ಊದುತ್ತಿದ್ದಾರೆ.

ಒಂದು ರೀತಿ ಕರೋನಾಗೆ ಧನ್ಯವಾದ ಹೇಳಬೇಕು. ಭಾರತೀಯ ಪದ್ಧತಿಗಳು, ನಂಬಿಕೆಗಳು, ಆಚಾರಗಳು ಕಾಲಬಾಹಿರವಲ್ಲ, ಕಾಲಾತೀತವಾದುದು ಎಂಬುದನ್ನು ನಮಗೆ ಅರಿಯುವಂತೆ ಮಾಡಿತಲ್ಲ ಅದಕ್ಕಾಗಿ ಅದಕ್ಕೆ ಮತ್ತೊಮ್ಮೆ ಧನ್ಯವಾದ ಹೇಳೋಣ. ●

ಮೌಲ್ಯೋಪಾಸನೆ

# ರಾಮಾಯಣ – ಮೌಲ್ಯಗಳ ಭಂಡಾರ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಮೌಲ್ಯಗಳನ್ನು ತಿಳಿಸುವ ಕಥೆಗಳು ಈ ಅಂಕಣದಲ್ಲಿ ಪ್ರತಿ ತಿಂಗಳು ಬರುತ್ತಿವೆ. ಒಂದೊಂದು ಕಥೆಯಿಂದಲೂ ಒಂದು, ಎರಡು, ಮೂರು ಹೀಗೆ ಕೆಲವು ಮೌಲ್ಯಗಳನ್ನು ತಿಳಿದುಕೊಳ್ಳುತ್ತಿದ್ದೇವೆ. ನಿಜ, ಇಂತಹ ಕಥೆಗಳು ನಮ್ಮ ಭಾರತೀಯ ಪುರಾಣಗಳಲ್ಲಿ, ಇತಿಹಾಸದಲ್ಲಿ ಸಮೃದ್ಧಿಯಾಗಿ ಸಿಕ್ಕುತ್ತವೆ. ಏಕೆಂದರೆ, ನಮ್ಮ ದೇಶದಲ್ಲಿ ಸಂಸ್ಕೃತಿ ಎನ್ನುವುದು ಬೆಳೆದು ಬಂದಿರುವುದೇ ಇಂತಹ ಮೌಲ್ಯಗಳ, ಆದರ್ಶಗಳ ಬುನಾದಿಯ ಮೇಲೆ. ಅದರಿಂದಲೇ ಅದಕ್ಕೆ ಒಂದು ಕಾಲದಲ್ಲಿ 'ವಿಶ್ವಗುರು'ವಿನ ಸನ್ಮಾನವೂ ಪ್ರಾಪ್ತವಾಗಿದ್ದುದು. ಆದರೆ, ಜಾಗತೀಕರಣದ, ಯುಗಧರ್ಮದ



ಕಾರಣದಿಂದ ಅಂದರೆ, ಬದಲಾಗುತ್ತಿರುವ ಸಮಯ–ಸಂದರ್ಭ–ಸನ್ನಿವೇಶಗಳ ಕಾರಣದಿಂದ ಭಾರತದ ಸಾಂಸ್ಕೃತಿಕ ಕ್ಷೇತ್ರವೂ ಕೂಡ ಸ್ವಲ್ಪಮಟ್ಟಿಗೆ ತನ್ನತನವನ್ನು ಕಳೆದುಕೊಳ್ಳುವಂತಾಯಿತು. ಬೇರೆ ಬೇರೆ ದೇಶಗಳ ಸಂಸ್ಕೃತಿ, ಸಂಪರ್ಕ, ವಿಚಾರಧಾರೆಯ ಪ್ರಭಾವದಿಂದಾಗಿ ತನ್ನ ಮೂಲಲಕ್ಷಣದಿಂದ ದೂರವಾಗಿ ಮಿಶ್ರಸಂಸ್ಕೃತಿಯ ಮತ್ತು ಸಂಪೂರ್ಣ ಹೊಸದಾದ ರೂಪವನ್ನೇ ತಳೆಯುವಂತಾಯಿತು. ಆದರೆ, ಅದರ ಮೂಲಸತ್ವ ಸ್ವಲ್ಪಮಟ್ಟಿಗೆ ಮರೆಯಾಯಿತಷ್ಟೇ ಹೊರತು ಶಾಶ್ವತವಾಗಿ ಕಣ್ಮರೆಯಾಗಲಿಲ್ಲ. ಆದರೂ ಪರಿಣಾಮವಾಗಿ ನಮ್ಮ ಯುವಜನಾಂಗಕ್ಕೆ ಅಥವಾ ಭವಿಷ್ಯದ ಜನಾಂಗವಾಗುವ ಮಕ್ಕಳಿಗೆ ನಮ್ಮ ಸಾಂಸ್ಕೃತಿಕ ಸಂಪತ್ತಿನ ವೈಶಿಷ್ಟ್ಯ, ಅದರ ಹಿರಿಮೆ ಯಾವುದೂ ತಿಳಿಯದಂತಾಯಿತು. ಅವರಿಗೆ ಅದರ ಬಗ್ಗೆ ಅವಜ್ಞೆಯೋ, ಅನಾಸಕ್ತಿಯೋ ಉಂಟಾಗಿ ಅವರಿಗೆ ಅದು ಅಪರಿಚಿತವಾಗಿಯೇ ಉಳಿಯುವಂತಾಯಿತು.

ಈ ಸಂದರ್ಭದಲ್ಲಿ ಮೌಲ್ಯವೆಂದೊಡನೆ ನೆನಪಾಗುವುದು ನಮ್ಮ ದೇಶದ ಸಂಸ್ಕೃತಿಯ ಮಹಾನ್ ಶಕ್ತಿ ಸ್ರೋತವಾಗಿರುವ ರಾಮಾಯಣ ಮಹಾಕಾವ್ಯ. ಅದು ಈಗ ಮತ್ತೊಮ್ಮೆ ಜನಮನವನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ಆವರಿಸಿಕೊಳ್ಳುತ್ತಿರುವುದು ಅತ್ಯಂತ ಸಂತಸದ ವಿಚಾರವೇ ಆಗಿದೆ. ಆದಿಕವಿಯೆಂಬ ಗೌರವಕ್ಕೆ ಭಾಜನವಾಗಿರುವ ವಾಲ್ಮೀಕಿ, ಆತನ ಮಹಾಕಾವ್ಯವಾದ ರಾಮಾಯಣವು ನಮ್ಮ ದೇಶದಾದ್ಯಂತ ಚಿರಪರಿಚಿತ, ದೇಶದಲ್ಲಿ ಅದೆಷ್ಟೇ ಭಾಷೆಗಳಿದ್ದರೂ ಬಹುತೇಕವಾಗಿ ಪ್ರಧಾನ ಭಾಷೆಗಳಲ್ಲೆಲ್ಲ ರಾಮಾಯಣ ತನ್ನ ಸ್ಥಾನವನ್ನು ಪಡೆದುಕೊಂಡಿದೆ. ಆಯಾ ರಾಜ್ಯಗಳ ಭಾಷೆಗಳಲ್ಲಿ ರಾಮಾಯಣವನ್ನು ಬರೆದು ಧನ್ಯರಾದ ಕವಿಶ್ರೇಷ್ಠರಿದ್ದಾರೆ, ಲೇಖಕರಿದ್ದಾರೆ, ಕಾದಂಬರಿಕಾರರಿದ್ದಾರೆ. ಜೊತೆಗೆ, ಹಳ್ಳಿಹಳ್ಳಿಯೂ ರಾಮಾಯಣದ ಆದರ್ಶ ವ್ಯಕ್ತಿಗಳೊಂದಿಗೆ ತಮ್ಮ ನೆಲದ ಬಾಂಧವ್ಯವನ್ನು ಹಂಚಿಕೊಳ್ಳಲೂ ಈಗಲೂ ಹಂಬಲಿಸುತ್ತವೆ, ಹೆಮ್ಮೆಪಡುತ್ತವೆ.

ಕಾರಣ, ರಾಮಾಯಣ ಮೌಲ್ಯಗಳ ಆಕರ, ಆದರ್ಶಗಳ ಭಂಡಾರ, ಪಿತೃಪ್ರೇಮ, ಮಾತೃಪ್ರೇಮ, ಭ್ರಾತೃವಾತ್ಸಲ್ಯ, ನಾರೀಧರ್ಮ, ಆದರ್ಶಪರಿವಾರದ ಪರಿಕಲ್ಪನೆ, ರಾಜಧರ್ಮ, ಪ್ರಜಾಧರ್ಮ, ಸತ್ಯಪಾಲನೆ, ದುಷ್ಟಸಂಹಾರ, ಸಾಮಾಜಿಕಪ್ರಜ್ಞೆ, ಸೇವಕಧರ್ಮ, ಗುರುಸ್ಥಾನದ ಮಹತ್ತ್ವ, ಶಿಷ್ಯಪ್ರೇಮ, ಧರ್ಮನಿರಪೇಕ್ಷಚಿಂತನೆ, ದ್ರೋಹ ಚಿಂತನೆಯ ತ್ಯಾಜ್ಯ, ದುರಾಗ್ರಹದ ವಿಪರೀತ ಫಲಿತಾಂಶ, ನಿಷ್ಪಕ್ಷಪಾತ ನ್ಯಾಯನಿರ್ಣಯ, ಐಹಿಕಭೋಗಗಳ ನಶ್ವರತೆ, ಪರಿಸರ ಪ್ರೇಮ, ಪ್ರಾಣಿ–ಪಕ್ಷಿಗಳಲ್ಲಿ ಕೂಡ ನೈತಿಕತೆಯನ್ನು ಗುರುತಿಸುವ ವಿಶಾಲಮನೋಭಾವ – ಒಂದೇ? ಎರಡೇ? ಇನ್ನೂ ಅದೆಷ್ಟೋ ಆದರ್ಶದ ಉದಾಹರಣೆಗಳು, ಮೌಲ್ಯಗಳು ಅದರಲ್ಲಿ ಕಂಡುಬರುತ್ತವೆ. ಅಲ್ಲಿನ ಪಾತ್ರಗಳ ಸಂಸ್ಕಾರ ಅತ್ಯಂತ ಅನುಕರಣೀಯವಾಗಿವೆ. ಸಮಾಜದ ಕುಲೀನ ಮನೆತನಗಳ ವ್ಯಕ್ತಿಗಳಷ್ಟೇ ಅಲ್ಲದೆ ಅತಿಸಾಮಾನ್ಯ ಜನರೂ ಕೂಡ ತಮ್ಮ ಉತ್ತಮ ಸಂಸ್ಕಾರದ ನಡವಳಿಕೆ ಮೂಲಕ ಎಲ್ಲರ ಮನವನ್ನು ಗೆಲ್ಲುತ್ತವೆ. ನಿಷಾದರಾಜನಾದ ಗುಹ ಮತ್ತು ಅವನ ಅನುಚರರು, ಶ್ರೀರಾಮನು ಗಂಗೆಯನ್ನು ದಾಟಲು ನೆರವಾದ ಅಂಬಿಗ, ಭಕ್ತಿಯ ಅವತಾರವೇ ಎನಿಸಿದ ರಾಮಭಕ್ತೆ ಶಬರಿ, ರಾಕ್ಷಸರಾಜನಾದ ರಾವಣನ ತಮ್ಮ ವಿಭೀಷಣನ ಅರಮನೆಯ ದಾಸಿ ತ್ರಿಜಟೆ – ಪಕ್ಷಿಗಳಾದ ಜಟಾಯು, ಸಂಪಾತಿ, ವಾನರಸಮಸ್ತರು – ಹೀಗೆ ವೈವಿಧ್ಯಮಯ ಜೀವಗಳಲ್ಲಿ ಧರ್ಮಾಚರಣೆಯ ಬದ್ಧತೆಯನ್ನು ಕಾಣುತ್ತೇವೆ. ಸಾಮಾನ್ಯ ಮನುಷ್ಯನ ತಿಳಿವಿನ ಹಂತದಿಂದ ಉನ್ನತ ಸ್ಥಾನದಲ್ಲಿರುವ ರಾಮಾಯಣದ ಈ ಪಾತ್ರಗಳು, ಪ್ರಾಣಿ–ಪಕ್ಷಿಗಳು ತಮ್ಮ ಧೀರ, ಗಂಭೀರ ಉದಾತ್ತ ಚಿಂತನೆಗಳ ಮೂಲಕ ಇತರರಲ್ಲಿ ಭಕ್ತಿ, ಗೌರವದ ಭಾವಗಳನ್ನು ಮೂಡಿಸುತ್ತವೆ.

ರಾಮಾಯಣ, ಮಹಾಭಾರತಗಳು ಭಾರತದ ಸಂಸ್ಕೃತಿಯ ಅವಿಭಾಜ್ಯ ಅಂಗಗಳೆಂದು ತಿಳಿದವರಿಗೆ ಈ ಮೌಲ್ಯಗಳು ಮನಸ್ಸಿಗೇ ತಟ್ಟುತ್ತವೆ. ಆದರೆ, ಇವೆಲ್ಲದರ ಅರಿವಿಲ್ಲದವರಿಗೆ ಈ ಪಾತ್ರಗಳ ಆದರ್ಶಗಳು ಅನುಕರಣಾರ್ಹವೇ ಎಂಬ ಸಂದೇಹ ಬರುತ್ತದೆ.

ಒಂದು ಉದಾಹರಣೆಯ ಮೂಲಕ ಇದನ್ನು ನಿರೂಪಿಸ ಬಹುದಾಗಿದೆ.

ಶ್ರೀರಾಮನು ಶಬರಿಯಿಂದ ಆದರೋಪಚಾರಗಳನ್ನು ಸ್ವೀಕರಿಸಿದ ನಂತರ ಅವಳ ಅಪೇಕ್ಷೆಯಂತೆ ಭಕ್ತಿಯ ವಿಧಾನಗಳನ್ನು ಉಪದೇಶಿಸುತ್ತಾನೆ. ಅವುಗಳಲ್ಲಿ ವ್ಯಕ್ತವಾಗುವ ಮೌಲ್ಯಗಳನ್ನು ಇಲ್ಲಿ ಗಮನಿಸಬಹುದಾಗಿದೆ. ನವವಿಧ ಭಕ್ತಿಯ ವಿವರ ಇಲ್ಲಿದೆ. "ಮೊದಲನೆಯದು ಸಜ್ಜನ ಸಾಂಗತ್ಯ, ಎರಡನೆಯದು ರಾಮಕಥೆಯನ್ನು

ಪುಟ 10 ಕ್ಕೆ ➤

# ಯುಗಪ್ರವರ್ತಕ : ಬಸವಣ್ಣ

ಡಾ॥ ಟಿ. ಎನ್. ಲೋಕೇಶ್
ಶಿಕ್ಷಣ ತಜ್ಞರು ಮತ್ತು ಚಿಂತಕರು



**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮಕೂಡಲ ಸಂಗಮ ದೇವರನೊಲಿಸುವ ಪರಿ**

**–ಬಸವಣ್ಣ**

ಜಾಗತಿಕ ಇತಿಹಾಸದಲ್ಲಿ ಕ್ರೌರ್ಯ, ಹಿಂಸೆ, ದೌರ್ಜನ್ಯ ಹಾಗೂ ತುಳಿತಕ್ಕೊಳಗಾಗಿ ಶ್ರೀ ಸಾಮಾನ್ಯ ರಾಜನ ಅಥವಾ ಆಡಳಿತದ ವಿರುದ್ಧ ದಂಗೆದ್ದು ಕ್ರಾಂತಿಗಳು ಪರಿಣಮಿಸಿರುವುದು ಇತಿಹಾಸದಲ್ಲಿನ ಸಾಮಾನ್ಯ ಸಂಗತಿ. ಆದರೆ ಮಾನವ ಜನಾಂಗದ ಸರ್ವತೋಮುಖ ಸಮ ಸಾಮಾಜಿಕ ಪುರೋಭಿವೃದ್ಧಿಯ ಬದುಕಿಗಾಗಿ ಕ್ರಾಂತಿ ನಡೆದದ್ದು ಅಸಾಮಾನ್ಯ ಹಾಗೂ ಅಪರೂಪ. ಬಸವಣ್ಣನವರಿಂದ ಇಂತಹ ಅಸಾಮಾನ್ಯ ಕ್ರಾಂತಿ 12 ನೇ ಶತಮಾನದಲ್ಲಿ ಭಾರತದಂತಹ ಪುಣ್ಯಭೂಮಿಯಲ್ಲಿ ಜರುಗಿದ ನಿರ್ಣಾಯಕ ಕ್ರಾಂತಿ ಪರ್ವವನ್ನು ಇತಿಹಾಸ ದಾಖಲಿಸಿದೆ. ಗೌತಮ ಬುದ್ಧನ ನಂತರ ಅವತರಿಸಿದ ಏಕಮೇವಾ ಕ್ರಾಂತಿಯ ಯುಗಪುರುಷ, ವಿಚಾರವಾದಿ, ವೈಚಾರಿಕ ಸಂತ ಹಾಗೂ ಸತ್ಯಾನ್ವೇಷಕ ಬಸವಣ್ಣನೆಂದರೆ ಅತಿಶಯೋಕ್ತಿಯಲ್ಲ.

ನಿರಾಕಾರ ಪರಮಾತ್ಮನನ್ನು ಮನುಷ್ಯ, ಪ್ರಾಣಿಯ ಆಕಾರ ಕೊಟ್ಟು ಪೂಜಿಸುವುದು ತಪ್ಪು. ಪರಮಾತ್ಮ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಮೀರಿದ ನಿರಾಕಾರ ಸ್ವರೂಪವಾದ್ದರಿಂದ ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ ಎಂದು 'ಇಷ್ಟಲಿಂಗದ' ಪರಿಕಲ್ಪನೆ ನೀಡಿದ್ದು ಅಂದಿನ ಕಾಲಘಟ್ಟದ ಬಹುದೊಡ್ಡ ಧಾರ್ಮಿಕ ಕ್ರಾಂತಿಯೇ ಆಗಿದೆ.

ಬಸವಣ್ಣನವರ ಇಷ್ಟಲಿಂಗದ ಭಾವ ಮಾನವ ನಿರ್ಮಿತ ಸಂಕೋಲೆಗಳಾದ ಜಾತಿ, ವರ್ಣ, ವರ್ಗ, ಬೇಧಗಳನ್ನು ಕಳಚಿ ಪ್ರತಿಯೊಬ್ಬನನ್ನು 'ಶರಣ'ನನ್ನಾಗಿ ಮಾಡಿ ವಾಸ್ತವದಲ್ಲಿ ಜಾತ್ಯತೀತ ಪರಿಕಲ್ಪನೆ ಮೂಡಿಸುವುದೇ ಆಗಿದೆ. ಶರಣನೆಂದರೆ ಜಾತಿ ಇಲ್ಲದವನು ಅವನೇ ವಿಶ್ವ ಮಾನವ ಎಂಬ ಸಂದೇಶ ಪಸರಿಸಿದ ತತ್ಪರಿಣಾಮ ವಿವಿಧ ಜಾತಿಗಳ ಕಾಯಕ ಜೀವಿಗಳು ಜಾತಿಯ ಸೀಮೋಲ್ಲಂಘನೆ ಮಾಡಿ ಶರಣ ಸಂಕುಲದಲ್ಲಿ ಒಂದು ವರ್ಗವಾಗಿ ಅನುರಣಗೊಂಡದ್ದು ಬಹುದೊಡ್ಡ ಸಾಮಾಜಿಕ ಕ್ರಾಂತಿಯೇ ಆಗಿದೆ. ಶರಣರಲ್ಲಿ ಸಮಗಾರ, ಮಾದಾರ, ಮೇದಾರ, ಡೋಹರ, ಅಂಬಿಗ ಮುಂತಾದವುಗಳ ಜಾತಿಸೂಚಕಗಳು ಕಾಯಕ ಸೂಚಕಗಳಾಗಿ ಮಾರ್ಪಟ್ಟು ಮಾನವ ಇತಿಹಾಸದ ಮಹತ್ತರ ಬದಲಾವಣೆಗೆ ಅಡಿಗಲ್ಲು ಹಾಕಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಬಸವಾದಿ ಶರಣರು ಹುಟ್ಟು ಹಾಕಿದ 'ವಚನಸಾಹಿತ್ಯ' ಶ್ರೀಸಾಮಾನ್ಯನ ದಿನನಿತ್ಯ ಬದುಕಿನ ಅನುಭಾವದ ಅಭಿವ್ಯಕ್ತಿಯ ಜೀವಸೆಲೆಯೇ ಆಗಿತ್ತು.

ಬಸವಣ್ಣನವರು ತಮ್ಮ ವಚನಗಳಲ್ಲಿ ಮಾನವನ ಉದಾತ್ತ ಜೀವನ ಶ್ರೇಷ್ಠತೆಗೆ ಬೇಕಾದ ಮಹೋನ್ನತ ಆದರ್ಶ ಮೌಲ್ಯಗಳಾದ 'ಅಂತರಂಗ ಶುದ್ಧಿ', 'ಬಹಿರಂಗ ಶುದ್ಧಿ', ' 'ಕಾಯಕವೇ ಕೈಲಾಸ', ದಾಸೋಹದಂತವುಗಳನ್ನು ಸಮಾಜದ ಅರಿವಿನ ಚೌಕಟ್ಟಿನಲ್ಲಿ ಅನುಷ್ಠಾನಗೊಳಿಸಿ ಮಾನವಕುಲದ ಉದ್ಧಾರಕ್ಕೆ ಶ್ರಮಿಸಿದ ಬಸವಣ್ಣ ಶ್ರೇಷ್ಠ ಮಾನವತಾವಾದಿ ಹಾಗು ಮುಕ್ತ ಚಿಂತನೆಯ ಹರಿಕಾರ.

ವಿಶ್ವದ ಪ್ರಥಮ ಸಂಸತ್ತು ಎಂಬ ಹೊಗಳಿಕೆಗೆ ಪಾತ್ರವಾಗಿರುವ 'ಅನುಭವ ಮಂಟಪ' ದ ಸಾಕಾರದ ಕರ್ತೃ, ಬಸವಣ್ಣ. ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ನೂರಾರು ಶರಣರ ಸಮಕ್ಷಮದಲ್ಲಿ ಅಂದಿನ ಸಮಕಾಲೀನ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳ ಚರ್ಚೆ, ಸಂವಾದ, ಸಹಚಿಂತನೆ, ಸುಧಾರಣೆ–ವಿಚಾರ ಮಂಥನಗಳು ಜರುಗಿ ಅದರ ಫಲಶ್ರುತಿಯಂತೆ ಶೋಷಣೆರಹಿತ ಸಮಾನತೆ, ಸಹಬಾಳ್ವೆ ಮತ್ತು ವಿಶ್ವಭ್ರಾತೃತ್ವಗಳ ಪರಿಕಲ್ಪನೆಗಳು ಸಾಕಾರಗೊಂಡು ಜಡ್ಡುಗಟ್ಟಿದ ಅರ್ಥವಿಲ್ಲದ ಆಚಾರ, ವಿಚಾರ, ಮೇಲು–ಕೀಳು, ಉಳ್ಳವ–ಬಡವ, ಸ್ತ್ರೀ–ಪುರುಷರೆಂಬ ಅಂತರಗಳ ಸಂಘರ್ಷ ತಾರತಮ್ಯಗಳಿಗೆ ಚಿಕಿತ್ಸಾರೂಪವಾಗಿ ನಾಗರೀಕ ಸಮಾಜದ ಪರಿಕಲ್ಪನೆ ಕಟ್ಟಿಕೊಡಲು ಶ್ರಮಿಸಿದ ಬಸವಣ್ಣನವರ ಸಾಧನೆ ಅದ್ವಿತೀಯವಾದದ್ದು.

ಅಸ್ಪೃಶ್ಯತೆಯ ನೆಪದಲ್ಲಿ ಸಾಮಾಜಿಕವಾಗಿ ಹಲವು ಜನಗಳಿಗೆ ಮಂದಿರದ ಪ್ರವೇಶಕ್ಕೆ ನಿಷಿದ್ಧ ಹೇರಿ ಶೂದ್ರರನ್ನು ಕೀಳೆಂದು ಅವಮಾನಿಸುತ್ತಿದ್ದ ಶೋಷಣೆಯ ವಿರುದ್ಧ ಧ್ವನಿಯೆತ್ತಿ ಕ್ರಾಂತಿಸುಧೆ ಹರಿಸಿದ ಬಸವಣ್ಣ 'ದೇಹವೇ ದೇವಾಲಯ', 'ಕಾಲೇ ಕಂಬ', 'ಶಿರವೇ ಹೊನ್ನ ಕಲಶ', 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ', ಎಂದು ಸಾರಿ ಧಾರ್ಮಿಕ ಅಂಧಶ್ರದ್ಧೆ, ಅಂಧಾನುಕರಣೆ, ಮೂಢನಂಬಿಕೆಗಳಿಂದ ಹೊರಬಂದು ಆತ್ಮಕಲ್ಯಾಣದ ಸಾಕ್ಷಾತ್ಕಾರ ಮಾಡಿಕೊಂಡು ಲೋಕಕಲ್ಯಾಣದ ಕೈಂಕರ್ಯಕ್ಕೆ ನೆರವಾಗಬೇಕು ಎಂಬುದು ದೇಶಾತೀತ, ಕಾಲಾತೀತ ಹಾಗೂ ನಮ್ಮ ಕಾಲಕ್ಕೂ ಪ್ರಸ್ತುತತೆ ಪ್ರಚುರಪಡಿಸುವ ಬಸವ ತತ್ವವಾಗಿದೆ.

ದಯೆಯೇ ಧರ್ಮದ ಮೂಲವಯ್ಯ ಎಂದು ಸಾರಿದ ಬಸವಣ್ಣನವರ ಜೀವಿಪ್ರೇಮ ಜಗತ್ತಿಗೆ ಮಾದರಿಯಾಗುವಂತದ್ದು. ಸಮಸ್ತ ಜೀವರಾಶಿಯನ್ನು ದಯೆಯಿಂದ ಕಾಣುವ ಮನಸ್ಥಿತಿ ಹೊಂದಿ, ಸಕಲ ಪ್ರಾಣಿಗಳಿಗೂ ದಯೆ ತೋರುವ ವಿಶ್ವ ಪ್ರೇಮದ ತತ್ವ ಬೆಳಸಿಕೊಳ್ಳಬೇಕು ಎಂಬ ಸಂದೇಶ ಸಾರಿದ್ದಾರೆ.

ಸಮಾಜದಲ್ಲಿ ಪ್ರತಿಯೊಬ್ಬರು ಕಾಯಕ ಮಾಡುವುದರ ಮೂಲಕ 'ದುಡಿಮೆಯ ಸಂಸ್ಕೃತಿ', 'ಶ್ರಮ ಸಂಸ್ಕೃತಿ' ಗೌರವಿಸಿ ಸಮಾಜದ ವಿಕಾಸಕ್ಕಾಗಿ ಶ್ರಮಿಸಬೇಕು ಎಂದು 'ಕರ್ಮ ಸಿದ್ಧಾಂತ'ವನ್ನು 'ಕಾಯಕ ಸಿದ್ಧಾಂತ'ವನ್ನಾಗಿ ಮನ್ವಂತರಗೊಳಿಸಿದ ಶರಣ ಶ್ರೇಷ್ಠ ಬಸವಣ್ಣ.

'ದಾಸೋಹ ತತ್ವ'ದ ಪರಿಕಲ್ಪನೆಯನ್ನು ಜಗತ್ತಿಗೆ ಪರಿಚಯಿಸಿ, ಯಾವುದೇ ವ್ಯಕ್ತಿ ಅಗತ್ಯಕ್ಕಿಂತ ಹೆಚ್ಚು ಗಳಿಸುವುದು ಅಕ್ಷಮ್ಯ ಅಪರಾಧ.

**ಪುಟ 10 ಕ್ಕೆ ➤**

➢ ಪುಟ 3 ರಿಂದ..... ಅಂಬೇಡ್ಕರ್...

1956 ರ ಅಕ್ಟೋಬರ್‌ನಲ್ಲಿ ಅಂಬೇಡ್ಕರರು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ನಾಗಪುರದಲ್ಲಿ ಬೌದ್ಧಮತದ ದೀಕ್ಷೆ ಪಡೆಯುತ್ತಾರೆ. ಅವರು ತಾವು ಹುಟ್ಟಿದ ಹಿಂದೂ ಧರ್ಮವನ್ನು ತೊರೆದು ಬೌದ್ಧರಾಗಿ ಮತಾಂತ ಹೊಂದಲು ಕಾರಣವಾದರೂ ಏನು? ಇಸ್ಲಾಂ ಮತಕ್ಕೆ ಸೇರಿಕೊಳ್ಳಲು ಅವರಿಗೆ ಅನೇಕ ಆಸೆ ಆಮಿಷಗಳನ್ನು ತೋರಿಸಲಾಗಿತ್ತು. ಅದೇ ರೀತಿ ಇಸಾಯಿಮತಕ್ಕೆ ಸೇರಲೂ ಆಕರ್ಷಣೆ ಒಡ್ಡಲಾಗಿತ್ತು. ಇದರಿಂದ ಕೋಟ್ಯಾಂತರ ದಲಿತರನ್ನು ತಮ್ಮ ಮತಕ್ಕೆ ಸೇರಿಸಿಕೊಂಡು ತಂತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಕುಯೋಜನೆ ಆ ಮತಗಳ ಪ್ರಮುಖರದ್ದಾಗಿತ್ತು. ಆದರೆ ಅಂಬೇಡ್ಕರ್‌ರವರು ಅವರ ಮೋಸದ ಬಲೆಗೆ ಬೀಳಲಿಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿತ್ತು. ಇದನ್ನು ಅವರ ಮಾತುಗಳಲ್ಲೇ ಓದಿರಿ. " ಮತಾಂತರದಿಂದಾಗಿ ಇದೇ ದೇಶದ ಮೇಲೆ ಒಟ್ಟಿನಲ್ಲಿ ಆಗುವ ಪರಿಣಾಮಗಳೇನು, ಇದನ್ನು ಗಮನಿಸುವುದು ಅಗತ್ಯ. ಮುಸಲ್ಮಾನ ಅಥವಾ ಕ್ರೈಸ್ತರಾಗಿ ದಲಿತವರ್ಗದವರು ಮತಾಂತರಗೊಂಡಲ್ಲಿ ಅವರು ರಾಷ್ಟ್ರೀಯತೆಯಿಂದ ದೂರ ಸರಿಯುತ್ತಾರೆ. ಅವರು ಇಸ್ಲಾಂ ಮತ ಸ್ವೀಕರಿಸಿದಲ್ಲಿ ಮುಸಲ್ಮಾನರ ಸಂಖ್ಯೆ ಎರಡು ಪಟ್ಟು ಬೆಳೆದು ಮುಸಲ್ಮಾನರ ಪ್ರಾಬಲ್ಯದ ಅಪಾಯ ನಿಜವಾಗುತ್ತದೆ. ಬದಲಾಗಿ ಕ್ರೈಸ್ತ ಮತವನ್ನು ಅವರು ಸೇರಿದಲ್ಲಿ ಕ್ರೈಸ್ತರ ಸಂಖ್ಯೆ ಇದರಿಂದ 6 ಕೋಟಿ ಆಗುತ್ತದೆ. ಅದರಿಂದಾಗಿ ಈ ದೇಶದ ಮೇಲೆ ಬ್ರಿಟನ್ನಿನ ಹಿಡಿತ ಇನ್ನಷ್ಟು ಬಿಗಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲೇ ಹುಟ್ಟಿದ ಮತವನ್ನು ಸ್ವೀಕರಿಸಿದಲ್ಲಿ ದೇಶದ ಭವಿಷ್ಯಕ್ಕೆ ಯಾವುದೇ ಅಪಾಯ ತಟ್ಟುವುದಿಲ್ಲ, ಮಾತ್ರವಲ್ಲ ಅದು ಇನ್ನಷ್ಟು ಸುರಕ್ಷಿತವಾಗುತ್ತದೆ. ದಲಿತವರ್ಗದವರು ರಾಷ್ಟ್ರೀಯತೆಯಿಂದ ದೂರವಾಗದೆ ಈ ದೇಶದ ರಾಜಕೀಯ ಮುನ್ನಡೆಗೆ ನೆರವಾಗುತ್ತಾರೆ. ಅದಕ್ಕಾಗಿ ದಲಿತವರ್ಗದವರು ಮತಾಂತರಗೊಳ್ಳುವುದೇ ಆದಲ್ಲಿ ದೇಶದ ಹಿತಕ್ಕಾಗಿ ಭಾರತ ಸಂಜಾತ ಮತಗಳನ್ನೆ ಸ್ವೀಕರಿಸುತ್ತದೆ." ಅಂಬೇಡ್ಕರ್ ಈ ರೀತಿ ಹೇಳಿದ್ದಷ್ಟೇ ಅಲ್ಲ ತಮ್ಮ ಜೀವನದಲ್ಲಿ ಅದನ್ನು ಸ್ವತಃ ಮಾಡಿತೋರಿಸಿದರು. ಬೌದ್ಧಮತ ಸ್ವೀಕರಿಸುವ ಮೊದಲದಿನ 13.10.1956 ರಂದು ನಾಗಪುರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ "ಸಮಯ ಬಂದಾಗ ಈ ದೇಶಕ್ಕೆ ಕನಿಷ್ಠತಮ ಹಾನಿಕರ ಎನಿಸುವಂಥ ಮಾರ್ಗವನ್ನು ಆರಿಸಿಕೊಳ್ಳುವೆ ಎಂದು ನಾನೊಮ್ಮೆ ಗಾಂಧೀಜಿಯವರಿಗೆ ಮಾತು ಕೊಟ್ಟಿದ್ದೆ. ಈಗ ಬೌದ್ಧಮತವನ್ನು ಆರಿಸಿಕೊಂಡು ನನ್ನ ಮಾತನ್ನು ನಾನು ಉಳಿಸಿಕೊಂಡಿರುವೆ. ಬೌದ್ಧಮತ ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಮತಾಂತರಗೊಳ್ಳುವುದರಿಂದ ಈ ದೇಶದ ಸಂಸ್ಕೃತಿ, ಚರಿತ್ರೆ ಹಾಗು ಪರಂಪರೆಗಳಿಗೆ ಯಾವುದೇ ಹಾನಿತಟ್ಟದಂತೆ ಸರ್ವವಿಧ ಎಚ್ಚರಿಕೆಯನ್ನು ನಾನು ವಹಿಸಿರುವೆ. ಈ ದೇಶಕ್ಕೆ ನಾನು ಮಾಡುವ ಸೇವೆಯೇ ಇದು."

ಓರ್ವ ನಾಯಕನ ಗುಣಲಕ್ಷಣಗಳನ್ನು ವಿವರಿಸುವಾಗ, ಸಾಮಾನ್ಯ ಸ್ಥಿತಿಯಲ್ಲಿ ಯಾರಾದರೂ ನಾಯಕರಾಗಬಹುದು, ಆದರೆ ಹಲವು ವಿಧವಾದ ಸವಾಲುಗಳನ್ನು ಏಕಕಾಲದಲ್ಲಿ ಎದುರಿಸಬೇಕಾದಾಗ, ಸಮಾಜದ ಒಟ್ಟು ಹಿತ ಯಾವುದರಲ್ಲಿದೆ ಎಂದು ಗುರುತಿಸಿ ಸರಿಯಾದ ನಿರ್ಣಯ ತೆಗೆದುಕೊಳ್ಳಬಲ್ಲ, ತನ್ನ ಅನುಯಾಯಿಗಳನ್ನು ಎಲ್ಲ ಸಮಯದಲ್ಲೂ ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬಲ್ಲ, ಸದಾ ಅಪ್ರಿಯವಾದರೂ ಸತ್ಯವನ್ನೇ ಹೇಳಬಲ್ಲವನೇ ನೈಜವಾದ ಸಾಮಾಜಿಕ ನಾಯಕ. ಅವನೇ ನೈಜ ಜನನಾಯಕ. ಈ ವಿವರಣೆ ಗಮನಿಸಿದಾಗ ಡಾ॥ ಅಂಬೇಡ್ಕರ್ ನೈಜ ಜನನಾಯಕರಷ್ಟೇ ಅಲ್ಲ, ನೈಜ ರಾಷ್ಟ್ರ ನಾಯಕರೂ ಆಗಿದ್ದರು ಎನ್ನುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ●

➢ ಪುಟ 4 ರಿಂದ..... ಅದ್ವೈತ ಅಮೃತಧಾರೆ...

ದೂರವಾಗಿ ಹೋಗು ಎಂದೆ. ಪಂಚಭೂತಗಳಿಂದ ದೇಹವು ದೂರ ಹೋಗಬೇಕೋ? ಯಾವಾಗ್ಯೂ ನಾಶವೇ ಆಗದೇ ಇರುವ ಸಾಕ್ಷಾತ್ ಪರಾತತ್ಪರ ವಸ್ತುವಾದ ಆತ್ಮವು ದೂರ ಹೋಗಬೇಕೋ? ದೇಹವನ್ನು ದೂರ ಹೋಗು ಎಂದು ನೀನು ಹೇಳಿದ್ದಿಯಾದರೆ, ಚೈತನ್ಯರಹಿತವೂ, ಜಡವೂ ಆಗಿರುವ ಈ ದೇಹ ಸ್ವತಂತ್ರಿಸಿ ಹೇಗೆ ದೂರವಾಗಿ ಹೋಗಬಲ್ಲುದು? ಹೇಳು. ಹಾಗಲ್ಲದೇ ಆತ್ಮನನ್ನು ಕುರಿತು ಹೇಳಿದ್ದಾದರೆ ಅದೃಶ್ಯನಾಗಿಯೂ ಸಕಲ ವಸ್ತು, ದೇಶ, ಕಾಲಗಳಲ್ಲಿಯೂ ಪರಿಪೂರ್ಣನಾಗಿರುವ ಪರಮಾತ್ಮನು ದೂರವಾಗಿ ಹೋಗುವನೆಂತು? ಸಾರವತ್ತಾದ ಸಕಲ ವೇದಾರ್ಥಗಳು ಯಾವ ಒಂಟಿ ವಸ್ತುವನ್ನು ಪರಮಪುರುಷನೆಂತಲೂ, ಪರಮಾತ್ಮನೆಂತಲೂ, ಶಾಶ್ವತನೆಂತಲೂ ಒಂದೇ ಎಂದು ಹೇಳುತ್ತಿರುವಾಗ ನೀನು ಸುಲಭವಾಗಿ ಭೇಧ ಕಲ್ಪಿಸಿ ಮಾತನಾಡುತ್ತಿರುವೆಯಲ್ಲಾ ಎಂದು ಕೇಳಿದ.

ಆಗ ಶಂಕರ ಯತಿಯು ಮನಸ್ಸಿನಲ್ಲೇ ಪರಮಾಶ್ಚರ್ಯ ತಳೆದು ಚಾಂಡಾಲನಾದವನು ಇಷ್ಟು ತತ್ವ ವಿಚಾರವನ್ನು ತಿಳಿಯಬಲ್ಲನೇ? ಎಂದು ಯೋಚಿಸಿ ಮನುಷ್ಯರು ಯಾರೇ ಆಗಿರಲಿ ಪ್ರೀತಿಯಿಂದ ಅದ್ವೈತಾಮೃತವನ್ನು ಮನಸ್ಸಿನಾಳದಿಂದ ಪಾನ ಮಾಡಿರುವನೋ ಆತನೇ ಸರ್ವತ ಶ್ರೇಷ್ಠ ಮನುಷ್ಯನೆಂದು ಭಾವಿಸಿ ಆತನ ಪಾದ ಕಮಲಗಳಿಗೆರಗಿ ಮನದ ಕಣ್ಣು ತೆರೆಸಿದ ಗುರುವೆಂದು ಗೌರವಿಸಿ, ಜ್ಞಾನ ಸೂರ್ಯನಷ್ಟೇ ಪವಿತ್ರವಾಗಿದ್ದು ಪ್ರಸರಣ ಕಾರ್ಯ ಮುಂದುವರೆಸುವಂತೆ ದಾರಿ ತೋರಿದ ಚಾಂಡಾಲ ವ್ಯಕ್ತಿಯ ಮಾತಿನಂತೆ ದೇಶದಲ್ಲಿ ಅದ್ವೈತದ ಸುಧೆಯನ್ನು ಹರಿಸಿದರು.

"ಅಹಂ ಬ್ರಹ್ಮಾಸ್ಮಿ" (ನನ್ನೊಳಗಿರುವ ಆತ್ಮವೇ ಪರಂಬ್ರಹ್ಮ) "ತತ್ವಮಸಿ" (ನೀನೂ ಅದೇ ಆತ್ಮದಿಂದ ಆಗಿರುವೆ) ಇದೇ ಸತ್ಯ ಮಿಕ್ಕೆಲ್ಲವೂ ಮಿಥ್ಯ ಎಂದರು. " ಸರ್ವಂ ಬ್ರಹ್ಮಮಯಂ ಜಗತ್" ವಿಶ್ವ ಮಾನವತೆಯ ಸಂದೇಶ ಸಾರುವ ಘನತತ್ವದ ವೇದಗಳ ತವರು ನೆಲ ಈ ಭಾರತ. ಉಚ್ಚ–ನೀಚ, ಮೇಲು–ಕೀಳು, ಬಲಿಷ್ಠ–ದುರ್ಬಲ ಎಂಬ ಯಾವುದೇ ಭೇಧ–ಭಾವಗಳಿಲ್ಲದ ಎಲ್ಲರೂ ಒಂದೇ, ಮನುಕುಲಕೆ ಲಾಭವಿಲ್ಲದ, ಆತ್ಮೋನ್ನತಿಗೆ ಜೊತೆಯಾಗದ ಅಜ್ಞಾನಿಗಳ ದುರಾಚರಣೆಗಳ, ಆಡಂಬರ, ಅಸ್ಪೃಶ್ಯ–ಅನೀತಿಕಾರಕ ಆಚರಣೆಗಳು ಮೂಲ ಸಂಸ್ಕೃತಿಯ ಧೋರಣೆಯಲ್ಲಾ. ಎಂದಿದ್ದರೂ 'ಲೋಕಾಸಮಸ್ತಾ ಸುಖಿನೋ ಭವಂತು' ಎನ್ನುವ ಉದಾರ ಭಾವದ ನೀತಿ ನಮ್ಮದು.

ಅದರ ಸತ್ಯದರ್ಶನ ಮಾಡಿಸಿ ಅಜ್ಞಾನದ ತಮದಲ್ಲಿದ್ದ ಮನುಕುಲವನ್ನು ಜ್ಞಾನದ ಬೆಳಕಿಗೆ ಕರೆತಂದ ಆದಿಗುರು ಶಂಕರರ ಜೀವನೋದ್ದೇಶ ಯಾರೂ ಮರೆಯಲಾರರು, ಮರೆತರೆ ಅದು ಆತ್ಮ ವಂಚನೆಯೇ ಸರಿ.

## ಶಬ್ದಬ್ರಹ್ಮ

**ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ. 'ನೋಡು, ನೀನು ಭಜನೆ ಮತ್ತು ಸಂಗೀತವನ್ನು ಪ್ರೀತಿಸಬೇಕು. ಸಂಗೀತದ ಮೂಲಕವೂ ಭಗವಂತನನ್ನು ಸೇರಬಹುದು ಎಂಬುದನ್ನು ನೀನು ಎಂದೆಂದಿಗೂ ಮನಸ್ಸಿನಲ್ಲಿಟ್ಟುಕೋ. ಸಂಗೀತವು 'ಶಬ್ದಬ್ರಹ್ಮ'ವೇ ಆಗಿದೆ. ಒಬ್ಬ ವ್ಯಕ್ತಿ ಧ್ಯಾನದ ಮೂಲಕ ಇದನ್ನು ಅನುಭವಿಸುತ್ತಾನೆ.**

# ಪ್ರಪಂಚದ ಮೂರನೇಯ ಮಹಾಯುದ್ಧದ ಮಹಾಮಾರಿಯಾಗಿ ಕೊರೊನಾ



**ಚಿದಾನಂದ ಆ. ಪಾಟೀಲ**
**ರಾಜ್ಯ ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂ.**

ನಾನು ಮಹಾಯುದ್ಧದ ಕಲ್ಪನೆ ಪಡೆದಿದ್ದೆ, ಆರನೇ ತರಗತಿಯ ಪಠ್ಯದಿಂದ, ನಂತರ ಅದು 9ನೇ ತರಗತಿಯಲ್ಲಿ, ತದನಂತರ ಪಿ.ಯು.ಸಿ ಹಂತದಲ್ಲಿ, ನಂತರ ಪದವಿ ಹಂತದಲ್ಲಿಯ ಕೊನೆಯಲ್ಲಿ ಸ್ನಾತಕೋತ್ತರ ಇತಿಹಾಸ ಓದುವಾಗ ಅದರ ವಿಶ್ವರೂಪ ದರ್ಶನವಾಯಿತು. ಅದೊಂದು ಪಠ್ಯವಿಷಯವಾಗಿ ನನಗೆ ಸಿಕ್ಕಿತ್ತು. ಆದರೆ ಈ ದೇಶದ ಪ್ರಧಾನ ಮಂತ್ರಿಗಳು ದೇಶವನ್ನು ಉದ್ದೇಶಿಸಿ ಮಾತನಾಡುತ್ತ "ನಾವು ಮೂರನೇ ಪ್ರಪಂಚ ಯುದ್ಧದಲ್ಲಿ ಇದ್ದೇವೆ. ನಾವೆಲ್ಲಾ ದೇಶಕ್ಕಾಗಿ ತ್ಯಾಗಗಳಿಗೆ ಸಿದ್ಧರಾಗಬೇಕು" ಎಂದಾಗ ನನಗೆ ಅನಿಸಿದ್ದು ನಾವು ಅಂತಹ ಸ್ಥಿತಿಯಲ್ಲಿ ಇದ್ದೀವಾ? ಎನ್ನುವ ಆಶ್ಚರ್ಯ, ಆದರೆ ಒಂದು ದಿನದ ಜನತಾ ಕರ್ಫ್ಯೂ ನಂತರ 21 ದಿನಗಳು ಕರ್ಫ್ಯೂ ಎಂದು ಘೋಷಿಸಿದಾಗ ಅದರ ತೀವ್ರತೆಯು ಆಳ ಅಗಲ ಅರ್ಥವಾಗತೊಡಗಿತು. ಇಂದು ಈ ಲೇಖನ ಬರೆಯುವಾಗ ಇನ್ನು 2 ವಾರಗಳ ಕಾಲ ದೇಶ ಕರ್ಫ್ಯೂ ಅನುಭವಿಸುವುದು ಬಾಕಿ ಇದೆ.

ಪ್ರಪಂಚದ ಯಾವುದೇ ದೇಶದಿಂದ ವಿಮಾನಗಳು ಬರುತ್ತಿಲ್ಲ. ದೇಶದಲ್ಲಿ ವಿಮಾನಗಳು ಹಾರುತ್ತಿಲ್ಲ. ದೇಶದಲ್ಲಿ ರಾಜ್ಯಗಳು ತಮ್ಮ-ತಮ್ಮ ಗಡಿಗಳನ್ನು ಮುಚ್ಚಿವೆ. ರೈಲ್ವೆ ನಿಲ್ದಾಣದಲ್ಲಿ ನವಿಲುಗಳು, ಮೊಲಗಳು ಆಟವಾಡುತ್ತಿವೆ. ಜಿಲ್ಲೆಗಳ ಗಡಿಗಳು ಬಂದಾಗಿವೆ. ತಾಲ್ಲೂಕು ಕೇಂದ್ರಗಳಲ್ಲಿ ರಸ್ತೆಗಳನ್ನು ಮುಚ್ಚಿ ಪೋಲಿಸರು ಕಾಯುತ್ತಿದ್ದಾರೆ. ಊರಿನ ರಸ್ತೆಗಳಿಗೆ ಊರಿನ ಜನರೇ ಮುಳ್ಳು, ದಿಮ್ಮಿಗಳು, ಕಲ್ಲುಗಳನ್ನು ಹಾಕಿ ಮುಚ್ಚಿದ್ದಾರೆ. ಅಂದರೆ ದೇಶಕ್ಕೆ ದೇಶವೇ ತನ್ನ ಮೇಲೆ ತಾನೇ ಕರ್ಫ್ಯೂ ವಿಧಿಸಿಕೊಂಡು, ಜನ ಮನೆಯಿಂದ ಹೋಗದೆ ಭಯದಲ್ಲಿ ದಿನ ಕಳೆಯುತ್ತಿದ್ದಾರೆ. ದೇಶದ ಎಲ್ಲಾ ಸಂಪರ್ಕ ಬಂದ್ ಆಗಿರುವ ಪ್ರತಿಫಲ ಕಾರ್ಮಿಕರು, ಬಡವರು, ಭಿಕ್ಷುಕರು, ಕೂಲಿಕಾರ್ಮಿಕರು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವಲಸೆ ಹೋದರು. ಕಾರ್ಮಿಕರು ದಿನ ನಿತ್ಯವು ಊಟಕ್ಕಾಗಿ ಪರಿತಪಿಸುವ ಸ್ಥಿತಿ ತಲುಪಿದೆ. ಅನೇಕ ಕಡೆಗಳಲ್ಲಿ ಅನೇಕ ಅವಾಂತರಗಳೂ ಸೃಷ್ಟಿಯಾಗಿವೆ. ಇದಕ್ಕೆಲ್ಲಾ ಕಾರಣ "ಕೊರೋನಾ" ಎನ್ನುವ ವೈರಸ್.

ಚೀನಾ ಮೂಲದ ಕೊರೊನಾ ಇಂದು ವಿಶ್ವವನ್ನೇ ವ್ಯಾಪಿಸಿ ಭಾರತವನ್ನು ಪ್ರವೇಶಿಸಿದೆ. ಇಟಲಿ ಪೂರ್ಣ ಆಹುತಿಯಾಗಿದೆ. ಅಮೇರಿಕಾದ ಅಧ್ಯಕ್ಷರು ಹೇಳುವಂತೆ ಮುಂದಿನ ಎರಡು ವಾರಗಳಲ್ಲಿ ಎರಡು ದಶಲಕ್ಷ ಜನರನ್ನು ಕೊರೊನಾ ಬಲಿಪಡೆಯಲಿದೆ ಎನ್ನುವ ವಾಕ್ಯ ಇಂದಿನ ಸ್ಥಿತಿಯ ಗಂಭೀರತೆಯನ್ನು ಅರ್ಥೈಸುತ್ತದೆ. ಪ್ರಪಂಚದಲ್ಲಿ ಇಂದು ಚೀನಾ ತನ್ನ ಪ್ರಾಬಲ್ಯತೆಗಾಗಿ ಜೈವಿಕ ಆಯುಧವಾಗಿ ಇದನ್ನು ಪ್ರಯೋಗಿಸಿದೆ ಎನ್ನುವ ವಾದವು ಚಾಲನೆಯಲ್ಲಿದೆ. ಏನೇ ಆದರೂ ಪ್ರಪಂಚ ನೋವು ಅನುಭವಿಸುತ್ತಿರುವುದಂತು ಸತ್ಯ..

ಕರ್ನಾಟಕದಲ್ಲಿ ರಸ್ತೆ ಸಂಚಾರವಿಲ್ಲ. ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಧಾರ್ಮಿಕ ಕೇಂದ್ರಗಳೂ ಮುಚ್ಚಿವೆ. ಕೈಗಾರಿಕೆಗಳು ರಜೆ ಘೋಷಿಸಿವೆ, ಶಾಲೆಗಳು ವಿಶ್ರಾಂತಿ ಪಡೆಯುತ್ತಿವೆ. ಅಗತ್ಯ ವಸ್ತುಗಳ ಸಂಗ್ರಹಕ್ಕಾಗಿ ಜನ ಪರಿತಪಿಸುತ್ತಿದ್ದಾರೆ. ಜನ ಹೊರಬರುವುದಕ್ಕೆ ಆಗದೆ, ಒಳಗೆ ಇರಲು ಆಗದೆ ಪರಿತಪಿಸುತ್ತಿದ್ದಾರೆ. ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ನಾನು ದೂರದರ್ಶನವನ್ನು ಅತಿಯಾಗಿ ಕ್ಷಣಕ್ಷಣದ ಮಾಹಿತಿಗಾಗಿ ನೋಡುತ್ತಿದ್ದ ನೆನಪು. ಈಗ ಆ ಸಂದರ್ಭ ಮರುಕಳಿಸಿದೆ. ಎಲ್ಲರೂ ದೂರದರ್ಶನ ವಾರ್ತೆಗಳನ್ನು ಇಲ್ಲವೇ ಇದಕ್ಕೆ ಸಂಬಂಧಿಸಿದ ವಾಟ್ಸಪ್, ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳನ್ನು ನೋಡು ವುದರಲ್ಲಿಯೇ ದಿನ ಕಳೆಯುತ್ತಿದ್ದಾರೆ.

ಸರ್ಕಾರಗಳು ಕೊರೊನಾದ ವೈದ್ಯಕೀಯ ವೆಚ್ಚದ ಪೂರ್ಣ ಹೊಣೆಹೊತ್ತು ಸರ್ಕಾರದ ಆಸ್ಪತ್ರೆಗಳ ಮುಖ ನೋಡದ ಜನರಿಗೂ ಸೇವೆಯಲ್ಲಿ ತೊಡಗಿವೆ. ಈ ಸಂದರ್ಭದಲ್ಲಿ ತಮ್ಮ ಮನೆ ಕುಟುಂಬದಿಂದ ದೂರವಿದ್ದು ಸೇವೆ ಸಲ್ಲಿಸುತ್ತಿರುವ ವೈದ್ಯಕೀಯ ಕ್ಷೇತ್ರದಲ್ಲಿರುವ ಎಲ್ಲರಿಗೂ, ಜೊತೆಯಲ್ಲಿ ಸಾರಿಗೆ, ಪೋಲಿಸ್, ಪೌರಕಾರ್ಮಿಕರು, ವಿದ್ಯುತ್, ನೀರು, ಔಷಧೋಪಚಾರದ ವಿಭಾಗದಲ್ಲಿ ದುಡಿಯುತ್ತಿರುವವರು ತಮ್ಮ ಜೀವವನ್ನು ಲೆಕ್ಕಿಸದೇ ಸೇವೆ ಸಲ್ಲಿಸುತ್ತಿದ್ದಾರೆ. ಅವರೆಲ್ಲರಿಗೂ ಮನೆಯಲ್ಲಿ ಬಂಧಿಯಾದ ನಮ್ಮಂತವರು ನಮನ ಸಲ್ಲಿಸಲೇಬೇಕು.

ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ಬೆಳೆದ ಭಾರತ ಅದನ್ನೆಲ್ಲಾ ಬಿಟ್ಟು ಬಹುದೂರ ಸಾಗಿದೆ. ಇಂದು ಮರಳಿ ಬರುವುದು ಅವಶ್ಯವೆಂದರು ಕಷ್ಟಸಾಧ್ಯ. ಆದರೂ ಭಾರತದ ಅಡುಗೆ ಮನೆಗಳು ವಿದೇಶದಷ್ಟು ಹಾಳಾಗಿಲ್ಲ ಎನ್ನುವುದು ಸಮಾಧಾನದ ವಿಷಯ. ಅಡುಗೆ ಮನೆಗಳು ಇಂದು ಸಹ ವೈದ್ಯಕೀಯ ಕುಟೀರಗಳಾಗಿ ಕಾರ್ಯ ಮಾಡುತ್ತಿರುವುದು ಸ್ವಲ್ಪ ಸಮಾಧಾನದ ವಿಷಯ. ಈ ಅಂಶವೇ ಕೊರೋನಾ ಬಹಳಷ್ಟು ಬಾಧಿಸದಿರಲು ಕಾರಣ ಎಂದು ವಿಶ್ವ ವಿಶ್ಲೇಷಿಸುತ್ತಿದೆ.

ಪ್ರಪಂಚದ ಎರಡು ಮಹಾಯುದ್ಧಗಳು ಅನೇಕ ಪಾಠ ಕಲಿಸಿದ್ದವು. ಹಾಗೆ ಈ ಕೊರೋನಾ ಮಹಾಯುದ್ಧವು ಒಳ್ಳೆಯದನ್ನು ಕಲಿಸುತ್ತಿದೆ ಎಂದು ಒಂದು ಕಡೆಗೆ ಈ ದಿನಗಳಲ್ಲಿ ನನ್ನಂತವನಿಗೆ ಅನಿಸಿದೆ. ಈ ನಿಮಿತ್ಯಕ್ಕೆ ಭಾರತೀಯ ಕುಟುಂಬ ಪದ್ಧತಿ ಗಟ್ಟಿಯಾಗಿದೆ. ಒಬ್ಬರ ಭಾವನೆಯನ್ನು ಇನ್ನೊಬ್ಬರು ಅರ್ಥಮಾಡಿಕೊಳ್ಳುವಂತಾಗಿದೆ. ಮನುಷ್ಯ ಯಂತ್ರ ಅಲ್ಲ ಎನ್ನುವುದನ್ನು ನೆನಪಿಸಿದೆ. ಅಡಿಗೆ ಮನೆಗಳು ಮತ್ತಷ್ಟು ಆಯುರ್ವೇದದ ಕುಟೀರಗಳಾಗಿವೆ. ನಿಸರ್ಗದ ಕೈಯಲ್ಲಿ ನಾವೆಲ್ಲಾ ಕುಬ್ಜರು ಎನ್ನುವುದನ್ನು ಕಲಿಸಿದೆ. ಹಣ ಇದ್ದರೆ ಎಲ್ಲವನ್ನು ಪಡೆಯಬಹುದು ಎನ್ನುವ ಭ್ರಮೆ ಕಳಚಿದೆ. ಏನೇ ಇದ್ದರು ಎಲ್ಲರಿಗೂ ಸಮಾನ ಎನ್ನುವ ಶರಣರು, ದಾಸರು, ಸಂತರು ಹಾಗೂ ಈ ದೇಶದ ಆಧ್ಯಾತ್ಮ ಶಕ್ತಿಯ ತಿರುಳು ಇಂದು ಮತ್ತೊಮ್ಮೆ ಎಲ್ಲರಿಗೂ ನಿಜ ಎನಿಸಿದೆ. ಅದೇನೇ ಒಳ್ಳೆಯ ಅಂಶಗಳನ್ನು ಪಟ್ಟಿ ಮಾಡಿದರೂ ಯುದ್ಧ ಯುದ್ಧವೇ, ಹೊರತು ಬೇರೆಯಲ್ಲ. ಅದರಿಂದ ವಿನಾಶವೇ ಹೆಚ್ಚು.

ಕೊನೆಯಲ್ಲಿ ನಾನೊಬ್ಬ ಶಿಕ್ಷಕನಾಗಿ ಕೆಲವು ಅಂಶಗಳನ್ನು

**ಪುಟ 10 ಕ್ಕೆ ➤**

➢ ಪುಟ 6 ರಿಂದ..... ರಾಮಾಯಣ...

ಕೇಳುವುದರಲ್ಲಿ (ಅಂದರೆ ದೈವಮಹಿಮೆಯ ಬಗ್ಗೆ) ಪ್ರೀತಿ, ಮೂರನೆಯದೇ ಅಭಿಮಾನವನ್ನು ಬಿಟ್ಟು ಗುರುವಿನ ಸೇವೆಯನ್ನು ಮಾಡುವುದು (ಆಚಾರ್ಯ ದೇವೋಭವ ಇದೇ ಅರ್ಥವಲ್ಲವೇ?) ಪರಮಾತ್ಮನ ಮಹಿಮೆಯನ್ನು ಕುರಿತು ನಿಷ್ಕಲ್ಮಶಮನದಿಂದ ಧ್ಯಾನಿಸುವುದು, ಸ್ತುತಿಸುವುದು, ಪರಮಾತ್ಮನಲ್ಲಿ ಅನನ್ಯ ವಿಶ್ವಾಸವಿಡುವುದೇ ಐದನೆಯ ವಿಧವಾಗಿದೆ. ಇಂದ್ರಿಯಗಳ ನಿಗ್ರಹ, ಶೀಲ, ಲೌಕಿಕ ಕರ್ಮಗಳಿಂದ ವಿರಕ್ತಿ, ನಿರಂತರ ಸತ್ಪುರುಷರ ಧರ್ಮಾಚರಣೆಗಳಲ್ಲಿ ತೊಡಗಿರುವುದು ಆರನೆಯ ಭಕ್ತಿಯಾಗಿದೆ. ಇಡೀ ಜಗತ್ತು ಪರಮಾತ್ಮನಿಂದ ಆವೃತವಾಗಿದೆಯೆಂದು ತಿಳಿದು, ಸಜ್ಜನರನ್ನು ಆ ಪರಮಾತ್ಮನಿಗಿಂತಲೂ ಹೆಚ್ಚಿನವರೆಂದು ಭಾವಿಸುವುದು ಏಳನೇ ಭಕ್ತಿ. ಎಂಟನೆಯದೇ ತನಗೆ ದೊರೆತುದರಲ್ಲಿಯೇ ತೃಪ್ತಿ ಹೊಂದಿ ಕನಸಿನಲ್ಲಿಯೂ ಇತರರ ದೋಷಗಳನ್ನು ಎಣಿಸದಿರುವುದು. ಇನ್ನು ಒಂಬತ್ತನೆಯ ಭಕ್ತಿಯೆಂದರೆ ಎಲ್ಲರೊಡನೆ ಸರಳವಾಗಿಯೂ, ನಿಷ್ಕಪಟವಾಗಿಯೂ ವರ್ತಿಸುವುದು ಹಾಗೂ ಮನಸ್ಸಿನಲ್ಲಿ ಪರಮಾತ್ಮನ ಬಗ್ಗೆ ಭರವಸೆಯಿಟ್ಟುಕೊಂಡು ಯಾವುದೇ ಸಂದರ್ಭದಲ್ಲಿ ಹರ್ಷ, ವಿಷಾದಗಳಿಗೆ ತುತ್ತಾಗದಿರುವುದು."

ಈ ನವವಿಧಭಕ್ತಿಯ ಉಪದೇಶದಲ್ಲಿನ ಮೌಲ್ಯಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುರೊಂದಿಗೆ ಸಂಸ್ಕಾರವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಲ್ಲಿ ನೆರವಾಗುತ್ತದೆ.

ರಾಮಾಯಣದಲ್ಲಿ ಕಂಡುಬರುವ ಇಂತಹ ಹಲವಾರು ಪ್ರಸಂಗಗಳು ಮೌಲ್ಯಗಳ ಉಪದೇಶವನ್ನು ಮಾಡುತ್ತವೆ.

ಆದರೆ ಈ ಎಲ್ಲ ಆದರ್ಶ ಗುಣಗಳು, ವಮೌಲ್ಯಗಳು ಮಾನವೀಯತೆಯ ಆಧಾರವನ್ನೇ ಅಂದರೆ ಪ್ರೀತಿ, ಮಮತೆ, ಕರುಣೆ, ಅನುಕಂಪ ಮುಂತಾದ ಗುಣಗಳನ್ನೇ ಅವಲಂಬಿಸಿವೆಯೆಂಬ ಅಂಶವನ್ನು ಅರಿತಾಗ ಮಾತ್ರ ಇದಾವುದೂ ಅಸಂಭವವಲ್ಲವೆಂಬುದು ತಿಳಿಯುತ್ತದೆ. ಅದಕ್ಕೇ ಇತ್ತೀಚಿನ ಕೆಲವು ದಶಕಗಳ ಹಿಂದಿನವರೆಗೂ ಹಳ್ಳಿಗಳಲ್ಲಿ ಪುರಾಣಶ್ರವಣವೆಂಬ ಸಾಂಸ್ಕೃತಿಕ ಆಚರಣೆ ನಡೆಯುತ್ತಿತ್ತು. ವಿದ್ಯಾವಂತ, ಅವಿದ್ಯಾವಂತ ಭೇದವಿಲ್ಲದೆ, ವಯಸ್ಸಿನ, ಸ್ತ್ರೀಪುರುಷರೆಂಬ ತಾರತಮ್ಯ ತೋರದೆ ಎಲ್ಲರಲ್ಲಿ ಆ ಪುರಾಣದ ಕಥೆಗಳನ್ನು (ಪ್ರಧಾನವಾಗಿ ರಾಮಾಯಣ, ಮಹಾಭಾರತವೇ) ಕೇಳಿಯೇ ಉತ್ತಮ ಸಂಸ್ಕಾರವು ಬೆಳೆಯಬೇಕೆಂಬುದೇ ಅದರ ಉದ್ದೇಶವಾಗಿರುತ್ತಿತ್ತು.

ಈ ಎಲ್ಲ ಸಂಸ್ಕಾರಗಳಿಂದ ಸಂಪೂರ್ಣವಾಗಿ ಭಿನ್ನವಾದ ದ್ವೇಷ, ದ್ರೋಹ, ಸ್ವಾರ್ಥ, ದುರಾಗ್ರಹ, ಸೇಡು ಮುಂತಾದ ಭಾವನೆಗಳೇ ಆವರಿಸಿರುವ ಈ ಕಾಲದಲ್ಲಿ ಇವುಗಳ ದುಷ್ಪರಿಣಾಮವನ್ನು ಪ್ರತ್ಯಕ್ಷವಾಗಿ ಕಾಣುತ್ತಿರುವ ಈ ದಿನಗಳಲ್ಲಿ ರಾಮಾಯಣದಲ್ಲಿ ಕಂಡರಿಸಿರುವ ಮೌಲ್ಯಗಳನ್ನು ಮತ್ತೆ ಜನಮಾನಸದಲ್ಲಿ ತುಂಬುವುದು ಅಗತ್ಯವಾಗಿದೆ.

ಅದಕ್ಕೇ ನಮ್ಮ ಘೋಷವಾಕ್ಯವೇ "ವಸುಧೈವ ಕುಟುಂಬಕಂ" ಎಂಬುದಾಗಿದೆ. ●

**ಅಯಂ ನಿಜಃ ಪರೋವೇತಿ ಗಣನಾ ಲಘು ಚೇತಸಾಂ ।**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಂ ॥**
**'ಇವನು ನಮ್ಮವ, ಇವನು ಪರಕೀಯ' ಈ ರೀತಿ ನೆನಸುವುದು ಕೀಳುಬುದ್ಧಿಯವರ ಲಕ್ಷಣ. ಔದಾರ್ಯದ ಸ್ವಭಾವದವರಿಗಾದರೋ ಈ ಸಮಸ್ತ ಪ್ರಪಂಚವೇ ಒಂದು ಕುಟುಂಬದಂತೆ. ಎಂದರೆ ಸ್ವಭಾವತಃ ಧಾರಾಳ ಮನಸ್ಸಿನವರಿಗೆ ಯಾವ ಬಗೆಯ ಪೂರ್ವದ್ವೇಷವೂ ಇರುವುದಿಲ್ಲ.**

➢ ಪುಟ 7 ರಿಂದ..... ಬಸವಣ್ಣ...

ಅಗತ್ಯಕ್ಕಿಂತ ಹೆಚ್ಚಿನದ್ದನ್ನು ಸಮಾಜದ ಏಳಿಗೆಗೆ ಸದ್ವಿನಿಯೋಗ ಮಾಡುವ ಶ್ರೇಷ್ಠ ಭಾವ ಸಮರ್ಪಣೆಯೇ ದಾಸೋಹ ಎಂದಿದ್ದಾರೆ.

ಸಮಾಜ, ವ್ಯಕ್ತಿ, ಬದುಕಿನ ಅನೇಕ ಡೊಂಕುಗಳನ್ನು ತಿದ್ದುವ ಬಸವಣ್ಣನವರ ವಚನಾಮೃತ ಆದರ್ಶ ಸಮಾಜದ ಅಡಿಗಲ್ಲು. ನುಡಿಯ ಮಹತ್ವದ ಬಗ್ಗೆ ಹೇಳುತ್ತಾ ಪ್ರತಿಯೊಬ್ಬರ ನುಡಿ ಮುತ್ತಿನ ಹಾರದಂತಿರಬೇಕು. ನುಡಿದಂತೆ ನಡೆಯಬೇಕು ಎಂದಿದ್ದಾರೆ. 'ಅಯ್ಯಾ ಎಂದರೆ ಸ್ವರ್ಗ', 'ಎಲವೋ ಎಂದರೆ ನರಕ' ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ.

**" ಮಡಕೆಯ ಮಾಡುವಡೆ ಮಣ್ಣೆ ಮೊದಲು**
**ತೊಡಿಗೆಯ ಮಾಡುವಡೆ ಹೊನ್ನೆ ಮೊದಲು**
**ಶಿವಪಥವನರಿವಡೆ ಗುರುಪಥವೆ ಮೊದಲು**
**ಕೂಡಲಸಂಗಮ ದೇವರನರಿವಡೆ**
**ಶರಣಸಂಗವೇ ಮೊದಲು "**

ಎಂಬ ವಚನದ ಮೂಲಕ ಶ್ರೀ ಗುರುವಿನ ಮಹತ್ವವನ್ನು ಎತ್ತಿಹಿಡಿದು ವಿಶ್ವಗುರು ಬಸವಣ್ಣ ಎನಿಸಿದ್ದಾರೆ. ಲೋಕದ ಡೊಂಕು ನೀವೇಕೆ ತಿದ್ದುವಿರಿ, ನಿಮ್ಮ ತನುಮನವ ಸಂತೈಸಿಕೊಳ್ಳಿ ಹಾಗೂ 'ಎನಗಿಂತ ಕಿರಿಯರಿಲ್ಲ' ಎಂಬ ಭಾವ ಹೊಂದಿ ಧನ್ಯತೆ ಪಡೆಯಿರಿ ಎಂದಿದ್ದಾರೆ.

ಬಸವಜಯಂತಿಯ ಶುಭಸಂದರ್ಭದಲ್ಲಿ ಬಸವಣ್ಣನವರ ವಿಚಾರ ರಶ್ಮಿಗಳು ಮನೆ–ಮನಗಳಲ್ಲಿ ತುಂಬಿ ಸುಖೀ ಸಮಾಜದ ನಿರ್ಮಾಣಕ್ಕೆ ಪ್ರೇರಣೆಯಾಗಲಿ. ●

➢ ಪುಟ 9 ರಿಂದ..... ಕೊರೊನಾ..

ಹೇಳಲೇಬೇಕು. ಕರ್ನಾಟಕದಲ್ಲಿ ಶೈಕ್ಷಣಿಕ ಸುಗ್ಗಿಯ ಕಾಲದ (ಪರೀಕ್ಷೆಗಳ ಅವಧಿ) ಪ್ರಾರಂಭದಲ್ಲಿ ಒಕ್ಕರಿಸಿದ ಕೊರೊನಾ ಎಲ್.ಕೆ.ಜಿಯಿಂದ 9ನೇ ತರಗತಿಯವರೆಗೆ ಪರೀಕ್ಷೆಗಳಿಲ್ಲದೇ ಮುಂದಿನ ತರಗತಿಗೆ ಪ್ರಮೋಷನ್ ಕೊಡಲಾಗಿದೆ. ಅದರಂತೆ ಎಸ್.ಎಸ್.ಎಲ್.ಸಿ ಪರೀಕ್ಷೆ ಮುಂದೂಡಿಕೆ ಪಿ.ಯು.ಸಿಯಲ್ಲಿ ಕೊನೆಯ ಒಂದು ವಿಷಯದ ಪರೀಕ್ಷೆ ಮುಂದೂಡಿದೆ. ಇದು ವಿದ್ಯಾರ್ಥಿ ಸಮೂಹದಲ್ಲಿ ಒಂದು ತರಹದ ಹತಾಶ ಭಾವನೆ ಮೂಡಿದೆ. ಲವಲವಿಕೆ ಕಳೆದುಕೊಂಡು ವಿದ್ಯಾರ್ಥಿಗಳು ಇತ್ತ ಓದಲು ಆಗದೆ ಅತ್ತ ಸುಮ್ಮನಿರಲು ಆಗದೆ ಮಾನಸಿಕ ಒತ್ತಡಕ್ಕೆ ಸಿಲುಕಿದ್ದಾರೆ. ಆದರೆ ಒಂದಂತು ಸತ್ಯವಾದ ಮಾತು. ಈ ಸಧ್ಯದ ಪರಿಸ್ಥಿತಿಯಲ್ಲಿ ಪರೀಕ್ಷೆಗಳನ್ನು ಮುಂದೂಡುವುದು ಅವಶ್ಯವಿತ್ತು. ಇದು ವಿದ್ಯಾರ್ಥಿಗಳ ಸ್ಥಿತಿಯಾದರೆ ಶಿಕ್ಷಕರು ಪರೀಕ್ಷೆಗಳನ್ನು ಯಾವಾಗ ಮಾಡುವುದು, ಫಲಿತಾಂಶ ಏನಾಗುವುದೋ, ಕೊರೊನಾ ಸಂಕಟ ಯಾವಾಗ ಅಂತ್ಯಗೊಳ್ಳುವುದು ಎಂದು ಮನೆಯಲ್ಲಿಯೇ ಬಂದಿಯಾಗಿ ಕಾಯುತ್ತಿದ್ದಾರೆ. ಇದರ ಮಧ್ಯದಲ್ಲಿ ಕೊರೊನಾ ಹರಡುವ ಭಯದಲ್ಲಿ ಸರ್ಕಾರ ಸರ್ವೆ ಕಾರ್ಯಕ್ಕೆ ಮತ್ತು ಚೆಕ್ ಪೋಸ್ಟಗಳಲ್ಲಿ ಶಿಕ್ಷಕರನ್ನು ಬಳಸುತ್ತಿರುವುದು ಶಿಕ್ಷಕರನ್ನು ಮತ್ತಷ್ಟು ಆತಂಕಕ್ಕೆ ಈಡು ಮಾಡಿದೆ.

ಅಂತು ಈ ಕೊರೋನಾ ಮಹಾಮಾರಿ ಮೂರನೇ ಪ್ರಪಂಚಯುದ್ಧದ ಪ್ರಮುಖ ಭಾಗವಾಗಿ ಇಂದು ವಿಶ್ವಕ್ಕೆ ಅನುಭವ ನೀಡುತ್ತಿದೆ. ಎಷ್ಟು ಕರಾಳತೆ ಸೃಷ್ಟಿಸಿದೆ ಎಂದರೆ ದೇವರನ್ನು ಕೇಳಲು ದೇವಸ್ಥಾನಕ್ಕೆ ಹೋಗುವ ಹಾಗೂ ಇಲ್ಲ. ಮನೆಯಲ್ಲಿಯೇ ಬಂಧಿಯಾದ ಈ ದಿನಗಳಲ್ಲಿ ಮನೆಯಿಂದಲೇ ದೇವರಲ್ಲಿ ಪ್ರಾರ್ಥಿಸೋಣ. "ದೇವರೇ ಬೇಗ ಸುಂದರ ಪ್ರಪಂಚವನ್ನು ಪ್ರಪಂಚದ ಜನ ಅನುಭವಿಸುವಂತೆ ಮಾಡು" ಎಂದು.

# ಶ್ರೀ ರಾಮಾನುಜಾಚಾರ್ಯ

■ ಚೆಲುವಪತಿ ಸಂಪತ್ ಕುಮಾರ್
ರಾಮಾನುಜಂ

ಆಚಾರ್ಯ ಶ್ರೀ ರಾಮಾನುಜರು ಭಾರತ ಕಂಡ ಸಂತ ಶ್ರೇಷ್ಠರಲ್ಲೊಬ್ಬರು. ತಮಿಳುನಾಡಿನ ಚೆನ್ನೈ ನಗರಕ್ಕೆ ಸಮೀಪದ ಶ್ರೀಪೆರಂಬುದೂರು ಇವರ ಹುಟ್ಟೂರು. ಕ್ರಿ. ಶ. 1017 ರಲ್ಲಿ ಆಸೂರಿ ಕೇಶವಾಚಾರ್ಯ ಕಾಂತಿಮತಿ ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಿಂದಲೇ ಪ್ರಚಂಡ ಬುದ್ಧಿವಂತರಾದ ರಾಮಾನುಜರು ಒಮ್ಮೆ ಕೇಳಿದ ಪಾಠವನ್ನು ಎಂದೂ ಮರೆಯುತ್ತಿರಲಿಲ್ಲ. ಗುರುಗಳು ಸದಾ ಅವರನ್ನು ಪ್ರಶಂಸಿಸುತ್ತಿದ್ದರು. ಚಿಕ್ಕಂದಿನಿಂದಲೂ ರಾಮಾನುಜರಿಗೆ ಗುರು ಹಿರಿಯರಲ್ಲಿ ಭಕ್ತಿ. ಹದಿನಾರು ವರ್ಷಕ್ಕೆ ರಕ್ಷಕಾಂಬಾಳ್ ಕೈಹಿಡಿದ ರಾಮಾನುಜರಿಗೆ ಅದೇ ವರ್ಷದಲ್ಲಿಯೇ ಪಿತೃವಿಯೋಗವಾಯಿತು.

ತಂದೆಯ ಅಗಲಿಕೆಯ ನೋವನ್ನು ಮರೆಯಲು ಹಾಗೂ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು ತಾಯಿ ಮತ್ತು ಪತ್ನಿಯೊಡನೆ ಶ್ರೀಪೆರಂಬುದೂರಿನಿಂದ ಕಾಂಚೀಪುರಕ್ಕೆ ಬಂದು ನೆಲೆಸಿದರು. ಅಲ್ಲಿ ಶ್ರೀ ಯಾದವಪ್ರಕಾಶರಲ್ಲಿ ವೇದ ವೇದಾಂತಗಳ ಪಾಠವಾಯಿತು. ತಮ್ಮ ಜ್ಞಾನದಾಹ ಮತ್ತು ವಿನಯದಿಂದ ಗುರುಗಳ ಮೆಚ್ಚಿನ ಶಿಷ್ಯರಾದರು ರಾಮಾನುಜರು. ಕಲಿಯುವಾಗ ಉಪನಿಷತ್ ವಾಕ್ಯಗಳಿಗೆ ಗುರುಗಳು ನೀಡುತ್ತಿದ್ದ ವಿವರಣೆ ಇನ್ನೂ ಹೆಚ್ಚು ಸಮರ್ಪಕವಾಗಿರಬಹುದು ಎಂದೆನಿಸಿದಾಗ, ರಾಮಾನುಜರು ಛಾಂದೋಗ್ಯೋಪನಿಷತ್ತಿನ 'ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣಿ' ಹಾಗೂ 'ಸರ್ವಂ ಖಲ್ವಿದಂ ಬ್ರಹ್ಮ', ತೈತ್ತರೀಯೋಪನಿಷತ್ತಿನ 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಮತ್ತು ಕಠೋಪನಿಷತ್ತಿನ 'ನೇಹ ನಾನಾಸ್ತಿ ಕಿಂಚನ' ವಾಕ್ಯಗಳಿಗೆ ಸ್ವತಂತ್ರ ವ್ಯಾಖ್ಯಾನ ನೀಡಲು, ಮತ್ಸರಗೊಂಡ ಗುರುಗಳು ಕಾಶೀಯಾತ್ರೆಯ ನೆಪದಲ್ಲಿ ರಾಮಾನುಜರನ್ನು ಕೊಲ್ಲಲು ಹುನ್ನಾರ ನಡೆಸಿದಾಗ, ಸಕಾಲದಲ್ಲಿ ಅದನ್ನರಿತ ರಾಮಾನುಜರು ದೈವಕೃಪೆಯಿಂದ ತಪ್ಪಿಸಿಕೊಂಡು ಕ್ಷೇಮವಾಗಿ ಕಾಂಚೀಪುರಕ್ಕೆ ಹಿಂದಿರುಗುತ್ತಾರೆ. ತಮ್ಮನ್ನು ಕೊಲ್ಲಿಸುವ ಆಲೋಚನೆಯಿದ್ದ ಗುರುಗಳ ಬಗ್ಗೆ ಯಾವುದೇ ಬೇಸರವಿಲ್ಲದೆ, ಹಿಂದಿದ್ದ ಗೌರವಕ್ಕೆ ಚ್ಯುತಿ ಇಲ್ಲದೆ ಅವರಿಂದ ಬೇರ್ಪಟ್ಟು, ಶ್ರೀವೈಷ್ಣವ ಆಚಾರ್ಯ ಪರಂಪರೆಯಲ್ಲಿ ಬಲುದೊಡ್ಡ ಹೆಸರಾದ ಶ್ರೀ ಯಾಮುನಾಚಾರ್ಯರ ಶಿಷ್ಯರಲ್ಲೊಬ್ಬರೂ, ಜ್ಞಾನಿಗಳೂ, ಭಕ್ತಶ್ರೇಷ್ಠರೂ ಆದ ಶ್ರೀ ಕಾಂಚೀಪೂರ್ಣರನ್ನು ಆಶ್ರಯಿಸಿದರು.

ಗುರು ಕಾಂಚೀಪೂರ್ಣರನ್ನು ಸತ್ಕಾರಕ್ಕಾಗಿ ಮನೆಗೆ ಕರೆದಾಗ, ಪತ್ನಿ ರಕ್ಷಕಾಂಬಾಳ್ ತೋರಿದ ಅನಾದರ ಹಾಗೂ ಮತ್ತೊಬ್ಬ ಗುರುಗಳಾದ ಮಹಾಪೂರ್ಣ ಮತ್ತವರ ಪತ್ನಿಯನ್ನು ಹೀಯಾಳಿಸಿದ ಘಟನೆ ಇವುಗಳಿಂದ ತೀವ್ರವಾಗಿ ನೊಂದ ರಾಮಾನುಜರಿಗೆ, ಜಾತಿ ಮತ್ತು ಸಂಪ್ರದಾಯಗಳಿಗೆ ಒತ್ತು ನೀಡುವ ಪತ್ನಿಗೂ, 'ಜ್ಞಾನಕ್ಕೂ, ಭಕ್ತಿಗೂ, ಗುಣಕ್ಕೂ ಜಾತಿಯಿಂದ ಆಗಬೇಕಾದುದು ಏನೂ ಇಲ್ಲ' ಎಂಬ ತಮ್ಮ ವಿಚಾರಕ್ಕೂ ಸರಿ ಬರುವುದಿಲ್ಲ ಎಂದು ಅನಿಸಿತು. ಪತ್ನಿಯನ್ನು ತವರಿಗೆ ಕಳಿಸಿ, ಕಾಂಚೀಪುರದ ಶ್ರೀ ವರದರಾಜಸ್ವಾಮಿಯ ಸನ್ನಿಧಿಯಲ್ಲಿ ಸಂನ್ಯಾಸ ದೀಕ್ಷೆ ತೊಟ್ಟು ಸಂಸಾರ ವಿಸರ್ಜನೆ ಮಾಡಿದರು. ನಂತರ ಗುರು ಮಹಾಪೂರ್ಣರ ಸೂಚನೆಯಂತೆ ಶ್ರೀರಂಗಕ್ಕೆ ತೆರಳಿ, ಶ್ರೀವೈಷ್ಣವ ಪರಂಪರೆಯನ್ನು ಮುಂದುವರೆಸುವ ಜವಾಬ್ದಾರಿ ಹೊತ್ತರು; ಪರಮಗುರು ಶ್ರೀ ಯಾಮುನಾಚಾರ್ಯರ ಅಪೇಕ್ಷೆಯೂ ಸಹ ಇದೇ ಆಗಿತ್ತು. ಯಾಮುನಾಚಾರ್ಯರ ಐವರು ಶಿಷ್ಯರಾದ ಕಾಂಚೀಪೂರ್ಣ, ಮಹಾಪೂರ್ಣ, ಗೋಷ್ಠಿಪೂರ್ಣ, ಮಾಲಾಧರ, ವರರಂಗ ಇವರಲ್ಲಿ ವೇದೋಪನಿಷತ್ತುಗಳನ್ನೂ, ವೇದಗಳ ಸಮಾನವೆಂದೇ ಪರಿಗಣಿಸಲ್ಪಟ್ಟ ತಮಿಳಿನ ದಿವ್ಯಪ್ರಬಂಧಗಳನ್ನೂ ಅಧ್ಯಯನ ಮಾಡಿದರು. ಮುಂದೆ ಸೋದರಮಾವನವರಾದ, ಯಾಮುನಾಚಾರ್ಯರ ಮತ್ತೊಬ್ಬ ಶಿಷ್ಯ, ಶ್ರೀಶೈಲಪೂರ್ಣರ ಬಳಿ ಪುರಾಣಗಳನ್ನು ಅಧ್ಯಯನ ಮಾಡಿದರು. ಹೀಗೆ ಯಾಮುನಾಚಾರ್ಯರಿಂದ ಕವಲಾದ ಜ್ಞಾನಗಂಗೆಯು ಅವರ ಶಿಷ್ಯರ ಮುಖಾಂತರ ರಾಮಾನುಜರನ್ನು ತಲುಪಿತು.

ಉತ್ತರಭಾರತದ ಹಲವಾರು ವಿದ್ವಾಂಸರನ್ನು ಸೋಲಿಸಿ, ದಕ್ಷಿಣಕ್ಕೆ ಬಂದಿದ್ದ ಯಜ್ಞಮೂರ್ತಿ ಎಂಬ ಮಾಯಾವಾದದ ಘನಪಂಡಿತರು ಶ್ರೀರಂಗದಲ್ಲಿ ಆಚಾರ್ಯ ರಾಮಾನುಜರನ್ನು ಎದುರಿಸಿದಾಗ, ಹದಿನೆಂಟು ದಿನಗಳ ಕಾಲ ನಡೆದ ಚರ್ಚೆಯಲ್ಲಿ ಆಚಾರ್ಯ ರಾಮಾನುಜರು ಯಜ್ಞಮೂರ್ತಿಯ ವಾದವನ್ನು ಖಂಡಿಸಿ, ಗೆಲುವು ಸಾಧಿಸುತ್ತಾರೆ. ವಾತ್ಸಲ್ಯಭರಿತವಾದ ಇವರ ವಾದಶೈಲಿಗೆ ಮನಸೋತ ಯಜ್ಞಮೂರ್ತಿ ಕೊನೆಗೆ 'ದೇವರಾಜಮುನಿ' ಎಂಬ ಹೆಸರಿನಲ್ಲಿ ರಾಮಾನುಜಾಚಾರ್ಯರ ಶಿಷ್ಯತ್ವ ಸ್ವೀಕರಿಸುತ್ತಾರೆ. ಅಚಲ ಶ್ರದ್ಧೆಯಿಂದ ಕೊನೆಯವರೆಗೂ ಗುರುಗಳ ಬೇಕು ಬೇಡ ಗಮನಿಸಿದ 'ಗೋವಿಂದ', ಭಾಷ್ಯಗಳಿಗೆ ಬರಹ ರೂಪ ಕೊಟ್ಟ 'ಕೂರೇಶ', ಗುರುನುಡಿಯೆಂದರೆ ವೇದವಾಕ್ಯ ಎಂಬಂತೆ ಜೀವಿಸಿದ 'ಧನುರ್ದಾಸ', ಗುರುಸೇವೆಯಲ್ಲಿ ಭಗವಂತನನ್ನು ಕಂಡ 'ಆಂಧ್ರಪೂರ್ಣ', ಗುರುಗಳ ಅಪ್ಪಣೆಯಂತೆ ತಿರುಪತಿಯಲ್ಲಿ ನೆಲೆಸಿ ಶ್ರೀ ವೆಂಕಟೇಶ್ವರನ ಸೇವೆಯಲ್ಲಿ ನಿರತರಾದ 'ಅನಂತಾಚಾರ್ಯ', ದಾಶರಥಿ, ಯಜ್ಞೇಶ, ವರದಾಚಾರ್ಯ ಎಂಬ ಶಿಷ್ಯೋತ್ತಮರನ್ನು ಹೊಂದಿದ್ದ ಶ್ರೀ ರಾಮಾನುಜಾಚಾರ್ಯರು, ಶ್ರೀಭಾಷ್ಯ, ಗೀತಾಭಾಷ್ಯ, ವೇದಾರ್ಥ ಸಂಗ್ರಹ, ವೇದಾಂತ ದೀಪ, ವೇದಾಂತ ಸಾರ, ಶರಣಾಗತಿ ಗದ್ಯ, ಶ್ರೀರಂಗ ಗದ್ಯ, ಶ್ರೀವೈಕುಂಠ ಗದ್ಯ ಮತ್ತು ನಿತ್ಯಗ್ರಂಥ ಎಂಬ ಗ್ರಂಥಗಳನ್ನು ರಚಿಸಿದರು; ಇವು 'ನವರತ್ನ'ಗಳೆಂದೇ ಹೆಸರಾಗಿವೆ.

ಆಚಾರ್ಯ ಶ್ರೀ ಶಂಕರರು ಪ್ರತಿಪಾದಿಸಿದ ಅದ್ವೈತಕ್ಕೆ ರಾಮಾನುಜರು ಗುಣವಿಶೇಷಗಳನ್ನು ಬೆರೆಸಿ ವಿಶಿಷ್ಟಾದ್ವೈತವನ್ನಾಗಿ ಮಾಡಿದರು. ವಿಶಿಷ್ಟಾದ್ವೈತ ಸಿದ್ಧಾಂತವು "ಸರ್ವಶಕ್ತನಾದ ಭಗವಂತನೊಬ್ಬನೇ. ಸಮಸ್ತ ಜೀವ ಮತ್ತು ಜಡ ಭಗವಂತನೇ ಅಲ್ಲ; ಆದರೆ ಅವನ ದೇಹ ಅಥವಾ ಭಾಗ. ಪರಮಾತ್ಮನಿಗೂ, ಜೀವ ಮತ್ತು ಜಡಕ್ಕೂ ಇರುವ ಸಂಬಂಧ, ದೇಹಕ್ಕೂ ಆತ್ಮಕ್ಕೂ ಇರುವಂತಹುದು. ಸಮಸ್ತ ಜೀವ ಮತ್ತು ಜಡ ಭಗವಂತನ ದೇಹವಾದರೆ, ಸಾಕ್ಷಾತ್ ಭಗವಂತ ಅದರ ಆತ್ಮ. ಪರಮಾತ್ಮ, ಜೀವ ಮತ್ತು ಜಡ ಎಲ್ಲವೂ ಸೇರಿ ಒಂದು ಅವಿಭಾಜ್ಯ ಅಂಗವಾಗಿದೆ. ಒಂದು ವಸ್ತುವಿಗೆ ಗುಣವಿಶೇಷಗಳಿರುವ ಹಾಗೆ ಜೀವ ಮತ್ತು ಜಡ ಪರಮಾತ್ಮನಲ್ಲೇ ಬೆರೆತಿವೆ. ಸೃಷ್ಟಿ ಭಗವಂತನ ನಿಜವಾದ ಕ್ರಿಯೆ; ಅದು ಮಾಯೆಯಲ್ಲ. ಜೀವ ಎಚ್ಚರಿಕೆಯ ಸ್ಥಿತಿಯಲ್ಲಿರುವುದರಿಂದ ಅದು ಜಡಕ್ಕಿಂತಲೂ ಮೇಲಿನ ಸ್ಥಾನದಲ್ಲಿದೆ. ಜೀವ ಮತ್ತು ಜಡ ಎರಡೂ ನಿಜವಾದದ್ದು ಹಾಗೂ ಪ್ರತ್ಯೇಕವಾದದ್ದು. ಪ್ರತಿಯೊಂದು ಜೀವವೂ ಮೋಕ್ಷ ಹೊಂದಿದ ನಂತರವೂ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ಮೋಕ್ಷ ಹೊಂದಿದ ಜೀವಾತ್ಮಗಳು ನಿರಂತರವಾಗಿ ಭಗವಂತನ ಸೇವೆಯಲ್ಲಿ ತೊಡಗಿರುತ್ತವೆ." ಎಂದು ಸಾರುತ್ತದೆ.

ಪುಟ 12 ಕ್ಕೆ ➤

➢ ಪುಟ 11 ರಿಂದ..... ರಾಮಾನುಜಾಚಾರ್ಯರು...

ಶ್ರೀಭಾಷ್ಯವನ್ನು ಬರೆದು ಮುಗಿಸಿದ ನಂತರ ರಾಮಾನುಜಾಚಾರ್ಯರು ತಮ್ಮ ಎಪ್ಪತ್ನಾಲ್ಕು ಶಿಷ್ಯರೊಡನೆ ಹಾಗೂ ಅವರ ಅನುಯಾಯಿಗಳೊಡನೆ ಕೂಡಿ, ತಾವು ಪ್ರತಿಪಾದಿಸಿದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಹರಡಲು ದೇಶ ಪರ್ಯಟನೆಗೆ ಹೊರಟರು. ಕುಂಭಕೋಣಂ, ಮಧುರೈ, ತಿರುವನಂತಪುರಂ, ಗೋಕರ್ಣ, ದ್ವಾರಕಾ, ಪುಷ್ಕರ, ಮಥುರಾ ಮೂಲಕ ಶ್ರೀಕ್ಷೇತ್ರ ಬದರಿಯನ್ನು ತಲುಪಿದರು. ಅಲ್ಲಿಂದ ಕಾಶ್ಮೀರದ ಶ್ರೀಶಾರದಾಪೀಠಕ್ಕೆ ಹೋಗಿ, ಅಲ್ಲಿನ ಪಂಡಿತರನ್ನು ಶಾಸ್ತ್ರವಾದದಲ್ಲಿ ಜಯಿಸಿ, ಕಾಶಿಯ ಕಡೆ ಹೊರಟರು. ಅಲ್ಲಿ ಅನೇಕ ವಿದ್ವಾಂಸರೂ, ವೇದಾಂತಿಗಳೂ, ಪಂಡಿತೋತ್ತಮರೂ ರಾಮಾನುಜಾಚಾರ್ಯರ ಶಿಷ್ಯಸಮೂಹಕ್ಕೆ ಸೇರಿದರು. ಅಲ್ಲಿಂದ ದಕ್ಷಿಣದತ್ತ ಪ್ರಯಾಣ ಬೆಳೆಸಿ, ಪುರಿ, ಸಿಂಹಾಚಲ, ಅಹೋಬಿಲ, ತಿರುಪತಿ, ಕಾಂಚೀಪುರದ ಮೂಲಕ ತಮ್ಮ ಕಾರ್ಯಕ್ಷೇತ್ರವಾದ ಶ್ರೀರಂಗಕ್ಕೆ ಬಂದು ತಲುಪಿದರು. ದಾರಿಯುದ್ದಕ್ಕೂ ಶಾಸ್ತ್ರಾರ್ಥ ಮಾಡುತ್ತ, ಅಲ್ಲಲ್ಲಿ ಮಠಗಳನ್ನು ಸ್ಥಾಪಿಸುತ್ತ, ವಿಶಿಷ್ಟಾದ್ವೈತವನ್ನು ಪ್ರಚಾರಪಡಿಸುತ್ತಾ ಭರತಖಂಡದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿದರು.

ನಂತರದ ಕಾಲದಲ್ಲಿ, ಶೈವಮತಾವಲಂಬಿಯಾದ ಚೋಳರಾಜನ ಮತಾಂಧತೆಯ ಸಂಕೋಲೆಯಿಂದ ತಪ್ಪಿಸಿಕೊಂಡು ಕನ್ನಡನಾಡಿನತ್ತ ಬಂದ ರಾಮಾನುಜಾಚಾರ್ಯರು, ಆಗ ಅಧಿಕಾರದಲ್ಲಿದ್ದ ಜೈನಮತದ ಅನುಯಾಯಿಯಾದ ಹೊಯ್ಸಳರ ದೊರೆ ಬಿಟ್ಟಿದೇವನ ಆಸ್ಥಾನಕ್ಕೆ ಆಗಮಿಸುತ್ತಾರೆ. ಅಲ್ಲಿ ಶಾಸ್ತ್ರಾರ್ಥ ನಡೆಸಿ, ಜೈನ, ಬೌದ್ಧ ಪಂಡಿತರನ್ನು ಸೋಲಿಸಿದರು. ಯತಿರಾಜ ರಾಮಾನುಜಾಚಾರ್ಯರಿಂದ ಪ್ರಭಾವಿತನಾದ ರಾಜಾ ಬಿಟ್ಟಿದೇವನು ಆಚಾರ್ಯರಿಂದ 'ವಿಷ್ಣುವರ್ಧನ' ಎಂದು ಪುನರ್ನಾಮಕರಣಗೊಂಡು, ಶ್ರೀವೈಷ್ಣವ ದೀಕ್ಷೆ ಸ್ವೀಕರಿಸಿದನು. ಆಚಾರ್ಯರ ನಿರ್ದೇಶನದಂತೆ ಮೇಲುಕೋಟೆಯಲ್ಲಿ ತಿರುನಾರಾಯಣ, ಬೇಲೂರಿನಲ್ಲಿ ಕೇಶವನಾರಾಯಣ, ತೊಂಡನೂರಿನಲ್ಲಿ ನಂಬಿನಾರಾಯಣ, ತಲಕಾಡಿನಲ್ಲಿ ಕೀರ್ತಿನಾರಾಯಣ ಹಾಗೂ ಗದಗದಲ್ಲಿ ವೀರನಾರಾಯಣ ಎಂಬ ಪಂಚನಾರಾಯಣ ದೇವಾಲಯಗಳ ನಿರ್ಮಾಣ ಮಾಡಿದನು. ಈ ಸಮಯದಲ್ಲಿ ಉತ್ತರದ ಮುಸಲ್ಮಾನ ಸೇನಾಪತಿಯೊಬ್ಬನ ಬಳಿ ಇರುವ ಚೆಲುವನಾರಾಯಣಸ್ವಾಮಿಯ ಉತ್ಸವಮೂರ್ತಿಯನ್ನು ಹಿಂದಿರುಗಿ ತಂದು, ಮೇಲುಕೋಟೆಯ ದೇವಾಲಯದಲ್ಲಿ ಪ್ರತಿಷ್ಠಾಪಿಸಬೇಕೆಂಬ ಸಂಕಲ್ಪವುಂಟಾಗಿ ರಾಮಾನುಜಾಚಾರ್ಯರು ಮತ್ತೊಮ್ಮೆ ಉತ್ತರಭಾರತದ ಪ್ರವಾಸ ಕೈಗೊಳ್ಳುತ್ತಾರೆ. ಚೆಲುವನಾರಾಯಣನ ಉತ್ಸವಮೂರ್ತಿಯನ್ನು ಪುನಃ ಕರೆತರುವಲ್ಲಿ ಯಶಸ್ವಿಯೂ ಆಗುತ್ತಾರೆ.

ಕನ್ನಡನಾಡಿನ ಯಾದವಾದ್ರಿಯಲ್ಲಿ (ಮೇಲುಕೋಟೆ) ಇಪ್ಪತ್ತು ವರ್ಷಗಳಷ್ಟು ಸುದೀರ್ಘ ಕಾಲ ನೆಲೆಸಿದ್ದ ರಾಮಾನುಜಾಚಾರ್ಯರಿಗೆ ಅವರ ಕಾರ್ಯಕ್ಷೇತ್ರವಾದ ಶ್ರೀರಂಗವು ಕೈಬೀಸಿ ಕರೆಯಲು, ಅಲ್ಲಿಗೆ ತೆರಳಿದ ಆಚಾರ್ಯರು ಕೊನೆಯವರೆಗೂ ಶ್ರೀರಂಗನಾಥಸ್ವಾಮಿಯ ಸೇವೆ ಸಲ್ಲಿಸುತ್ತಿದ್ದರು. ಸಾವಿರಾರು ಜನ ಎಲ್ಲ ದಿಕ್ಕುಗಳಿಂದಲೂ ಬಂದು ಅವರ ದರ್ಶನ ಪಡೆಯುತ್ತಿದ್ದರು. ಜ್ಞಾನ ಮತ್ತು ಭಕ್ತಿಮಾರ್ಗಗಳನ್ನು ಕುರಿತು, ತಮ್ಮ ಅಮೃತಮಯವಾದ ನುಡಿಗಳಿಂದ ಉಪದೇಶಿಸುತ್ತಿದ್ದ ರಾಮಾನುಜಾಚಾರ್ಯರ ಪ್ರವಚನ ಕೇಳಲು ಜನಜಾತ್ರೆ ಸೇರುತ್ತಿತ್ತು. ಅವರ ದರ್ಶನದಿಂದ, ಉಪದೇಶದಿಂದ ಅಂತರಂಗ ಶುದ್ಧಿಯನ್ನು ಪಡೆದವರಾಗಿ, ಅನಿರ್ವಚನೀಯ ಆನಂದವನ್ನು ಅನುಭವಿಸಿ ಧನ್ಯರಾಗಿ ಹಿಂದಿರುಗುತ್ತಿದ್ದರು. ಹೀಗೆ ಈ ಭೂಮಿಯ ಮೇಲೆ ಬಹುಜನರ ಹಿತ ಮತ್ತು ಸುಖಕ್ಕಾಗಿ ನೂರಿಪ್ಪತ್ತು ವರ್ಷಕಾಲ ಜೀವಿಸಿದ್ದು, ಆಯ್ದ ಶಿಷ್ಯರನ್ನು ಯೋಗ್ಯತೆಯಲ್ಲಿ ತಮ್ಮ ಸರಿಸಮರನ್ನಾಗಿ ಮಾಡಿದರು. ಕ್ರಿ. ಶ. 1017 ರಲ್ಲಿ ಪಿಂಗಳನಾಮ ಸಂವತ್ಸರದಲ್ಲಿ ಹುಟ್ಟಿ, ಕ್ರಿ. ಶ. 1137 ರಲ್ಲಿ ಮತ್ತದೇ ಪಿಂಗಳನಾಮ ಸಂವತ್ಸರದಲ್ಲಿ ಅವತಾರವನ್ನು ಮುಗಿಸಿದ ರಾಮಾನುಜಾಚಾರ್ಯರು ಎರಡು ಪೂರ್ಣ ಸಂವತ್ಸರ ಚಕ್ರಗಳನ್ನು ಜೀವಿಸಿದರು.

ಪ್ರತಿಯೊಬ್ಬ ಅವತಾರಪುರುಷನ ಜೀವನವೂ ಸ್ವಂತದ್ದಾಗಿರುವುದಿಲ್ಲ. ಸಮಾಜಕ್ಕಾಗಿ ಬದುಕಿ, ಲೋಕೋದ್ಧಾರಕ್ಕಾಗಿ ಬೋಧಿಸಿ, ಮುಂದಿನ ಪೀಳಿಗೆಗೆ ಸದಾ ಮಾದರಿಯಾಗಿರುವಂತೆ ನಡೆದು ತೋರಿಸಿಕೊಡುತ್ತಾರೆ. ಶ್ರೀ ರಾಮಾನುಜಾಚಾರ್ಯರ ಜೀವಿತಾವಧಿಯಲ್ಲೂ ಈ ರೀತಿಯ ಸಮಾಜೋದ್ಧಾರದ ಹಾಗೂ ನೀತಿ ಪಾಠವಿರುವ ಎಷ್ಟೋ ಘಟನೆಗಳಿವೆ. ಅವುಗಳಲ್ಲಿ ಪ್ರಮುಖವಾದ ಕೆಲವನ್ನು ನೆನೆಸಿಕೊಳ್ಳುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ತೀರಾ ಅವಶ್ಯ ಎನಿಸುತ್ತದೆ.

ಜ್ಞಾನೋತ್ತಮರೂ, ಭಕ್ತಶ್ರೇಷ್ಠರೂ ಆದ ಕಾಂಚೀಪೂರ್ಣರು ತಮ್ಮೂರಿಗೆ ಬಂದಾಗ, ಅವರ ಬಗ್ಗೆ ಕೇಳಿ ತಿಳಿದಿದ್ದ ರಾಮಾನುಜರು ಅವರನ್ನು ಮನೆಗೆ ಕರೆದು ಸತ್ಕರಿಸಿ, ಮಾರ್ಗದರ್ಶನ ನೀಡಬೇಕೆಂದು ಬೇಡಲು, ಕಾಂಚೀಪೂರ್ಣರು, "ನಾನು ಬ್ರಾಹ್ಮಣನಲ್ಲ, ಬ್ರಾಹ್ಮಣರಾದ ನೀವು ನನಗೆ ನಮಸ್ಕರಿಸುವುದೂ ತಪ್ಪು; ಬೇರೆ ಯಾರಾದರೂ ಒಳ್ಳೆಯ ಮಾರ್ಗದರ್ಶಕರು ನಿಮಗೆ ಸಿಗುತ್ತಾರೆ." ಎಂದು ಹೇಳಲು, ರಾಮಾನುಜರು, "ಪೂಜ್ಯರೇ! ಕುಲದಿಂದಲೇ ಒಬ್ಬ ಮನುಷ್ಯನ ಮಹಿಮೆಯನ್ನು ನಿಷ್ಕರ್ಷಿಸುವುದು ಸರಿಯಲ್ಲ. ಜ್ಞಾನ, ಭಕ್ತಿ ಮತ್ತು ಗುಣ ಮುಖ್ಯವೇ ಹೊರತು ಜಾತಿಯಲ್ಲ. ಜ್ಞಾನವಂತರೂ, ಭಾಗವತರೂ ಆದ ತಮ್ಮಲ್ಲಿ ಕಲಿಯುವುದು ನನ್ನ ಸೌಭಾಗ್ಯ." ಎಂದು ವಿನಯಪೂರ್ವಕವಾಗಿ ಉತ್ತರಿಸುತ್ತಾರೆ. ಚಿಕ್ಕ ವಯಸ್ಸಿನ ರಾಮಾನುಜರ ದೊಡ್ಡ ವಿಚಾರಧಾರೆಗೆ ಮನಸೋತರು ಕಾಂಚೀಪೂರ್ಣರು. ಜಾತಿ, ಮತ, ಕುಲಗಳನ್ನು ಮೀರಿದ ವಿಶ್ವಮಾನವತಾವಾದದತ್ತ ಮೊದಲ ಹೆಜ್ಜೆ ಇದಾಗಿತ್ತು.

ಎಷ್ಟೋ ಬಾರಿ ನಮ್ಮ ಸುತ್ತಮುತ್ತಲಿನವರು ದೈವನಿಂದನೆ, ನಮ್ಮ ರಾಷ್ಟ್ರ, ಸಂಸ್ಕೃತಿ, ಪರಂಪರೆ ಇವುಗಳ ಬಗ್ಗೆ ನಿಂದಿಸುವುದು, ತುಚ್ಛವಾಗಿ ಮಾತಾಡುವುದು ಇತ್ಯಾದಿಗಳನ್ನೆಲ್ಲಾ ಸಹಿಸಿಕೊಂಡಿರುತ್ತೇವೆ. ಅಂತಹ ತಪ್ಪನ್ನು ಖಂಡಿಸುವುದಿರಲಿ, ಆ ತಪ್ಪು ಎತ್ತಿ ತೋರಿಸಲೂ ಸಹ ಮುಂದಾಗದೆ ಸುಮ್ಮನಾಗುತ್ತೇವೆ. ರಾಮಾನುಜರು ಯಾದವಪ್ರಕಾಶರ ಬಳಿ ಕಲಿಯುತ್ತಿದ್ದಾಗ ಒಮ್ಮೆ, ಛಾ0ದೋಗ್ಯೋಪನಿಷತ್ತಿನ 'ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ' ಎಂಬ ವಾಕ್ಯಕ್ಕೆ ಗುರುಗಳು "ಚಿನ್ನದ ಹಾಗೆ ಪ್ರಕಾಶಿಸುವ ಆ ಪರಮಪುರುಷನ ಎರಡು ಕಣ್ಣುಗಳು ಕಪಿಯ ಪೃಷ್ಠದಂತೆ ಕೆಂಪಾಗಿರುವ ತಾವರೆಗಳಂತಿವೆ." ಎಂದು ಅರ್ಥ ಹೇಳಿದರು. 'ಕಪ್ಯಾಸಂ' ಎಂಬುದಕ್ಕೆ ಕಪಿಯ ಹಿಂಭಾಗವೆಂದು ಅವರು ಅರ್ಥೈಸಿದ್ದರು. ಪರಮಾತ್ಮನ ಬಗೆಗೆ ಇಂತಹ ಹೀನ ಉಪಮೆಯನ್ನು ಕೇಳಿದ ರಾಮಾನುಜರಿಗೆ ಅತೀವ ದುಃಖವುಂಟಾಯಿತು. ಗುರುಗಳಿಗೆ ಅತ್ಯಂತ ಗೌರವವಿರುತ್ತಿದ್ದ ಆ ಕಾಲದಲ್ಲಿ, ಅರಿತೋ ಅರಿಯದೆಯೋ ಗುರುಗಳಿಂದಾದ ತಪ್ಪನ್ನು ಅವರ ಗಮನಕ್ಕೆ ತರುತ್ತಾರೆ ರಾಮಾನುಜರು. ಕಣ್ಣೀರಿಡುತ್ತ, "ಗುರುಗಳೇ! ಅನರ್ಥ ಬರುವಂತಹ ನೇರವಾದ ವಿವರಣೆಯಿಂದ ದೈವನಿಂದನೆಯಾಗಿ ಅಪಚಾರವಾಗುತ್ತಿದೆ. ಇದಕ್ಕೆ

ಪುಟ 13 ಕ್ಕೆ ➢

➢ ಪುಟ 12 ರಿಂದ..... ರಾಮಾನುಜಾಚಾರ್ಯರು...

ಸರಿಯಾದ ಅರ್ಥ ಬೇರೆ. 'ಕಂ ಜಲಂ ಪಿಬತೀತಿ – ಕಪಿ:, ಸೂರ್ಯ:' ಎಂದರೆ ನೀರನ್ನು ಯಾರು ಕುಡಿಯುತ್ತಾನೋ ಅವನು ಕಪಿ. ನೀರನ್ನು ಕುಡಿಯುವವನು, ಹೀರುವವನು ಸೂರ್ಯ; 'ಆಸ' ಎಂದರೆ ಅರಳಿಸು. ಪುಂಡರೀಕ ಎಂದರೆ ತಾವರೆ. 'ಸೂರ್ಯಕಿರಣದಿಂದ ಅರಳಿದ ಕೆಂದಾವರೆಯ ಹಾಗೆ ಕಣ್ಣುಗಳುಳ್ಳ ಪುರುಷ' ಎಂದು ಆ ವಾಕ್ಯವನ್ನು ಅರ್ಥೈಸಿಕೊಂಡರೆ ಸಮರ್ಪಕವಾಗಿರುತ್ತದೆ." ಎಂದು ಹೇಳಿದರು. ಗುರುಗಳಿರಲಿ, ಹಿರಿಯರಿರಲಿ, ದೈವನಿಂದನೆಯಂತಹ ಅಪಚಾರ ಸಹನೀಯವಲ್ಲ ಎಂದು ತೋರಿಸಿಕೊಟ್ಟರು ರಾಮಾನುಜರು.

ಶ್ರೀಮದ್ರಾಮಾಯಣದ ಉತ್ತರಕಾಂಡದಲ್ಲಿ ಒಂದು ವಿಶಿಷ್ಟ ವೃತ್ತಾಂತವನ್ನು ನೋಡುತ್ತೇವೆ. ಪ್ರಭು ಶ್ರೀರಾಮಚಂದ್ರ ಮತ್ತು ಕಾಲಪುರುಷನ ನಡುವೆ ರಹಸ್ಯವಾದ ಮಾತುಕತೆ ನಡೆಯುತ್ತಿರುವಾಗ 'ಮಧ್ಯೆ ಪ್ರವೇಶಿಸಿದವರಿಗೆ ಮರಣದಂಡನೆ' ಎಂಬುದು ಪ್ರಭುವಿನ ಆಜ್ಞೆ. ಆದರೆ ಈ ಮಧ್ಯೆ, ಸುಲಭಕೋಪಿಗಳಾದ ದೂರ್ವಾಸಮುನಿಗಳು ದ್ವಾರಪಾಲಕನಾಗಿದ್ದ ಲಕ್ಷ್ಮಣನ ಬಳಿ ಬಂದು, "ಒಡನೆಯೇ ರಾಮದರ್ಶನವನ್ನು ಮಾಡಿಸು, ಇಲ್ಲದಿದ್ದರೆ ಇಡೀ ರಘುವಂಶವನ್ನೇ ಶಾಪದಿಂದ ಸುಟ್ಟು ನಿರ್ನಾಮ ಮಾಡಿಬಿಡುವೆ." ಎಂದು ಹೇಳಿದಾಗ, ಮಹಾತ್ಮನಾದ ರಾಮಾನುಜ, ಲಕ್ಷ್ಮಣ, "ನನಗೊಬ್ಬನಿಗೇ ಮರಣದಂಡನೆಯಾಗಲಿ, ಸರ್ವವಿನಾಶವಾಗದಿರಲಿ" ಎಂದು ಶ್ರೀರಾಮ ಮತ್ತು ಕಾಲಪುರುಷನ ನಡುವಿನ ಸಂಭಾಷಣೆ ಮಧ್ಯೆ ಪ್ರವೇಶಿಸಿ, ಇಡೀ ರಘುಕುಲವನ್ನು ಉಳಿಸುತ್ತಾನೆ. ಅದೇ ರೀತಿ ಆಚಾರ್ಯ ರಾಮಾನುಜರ ಜೀವನದಲ್ಲಿಯೂ ಒಂದು ಘಟನೆ ಸಾಕ್ಷಿಯಾಗಿದೆ. ಹಲವಾರು ದಿನಗಳ ಕಾಲ ಪರೀಕ್ಷಿಸಿ, ಕೊನೆಗೆ 'ಭವಸಾಗರವನ್ನು ದಾಟಿಸುವ ನಾರಾಯಣ ಮಹಾಮಂತ್ರವನ್ನು ಸಾಮಾನ್ಯ ಜನರಿಗೆ ಬೋಧಿಸಬಾರದು, ಹಾಗೊಮ್ಮೆ ಮಾಡಿದಲ್ಲಿ ನರಕಪ್ರಾಪ್ತಿಯಾಗುವುದು' ಎಂಬ ಷರತ್ತಿನೊಂದಿಗೆ, ಗುರುಗಳಾದ ಗೋಷ್ಠಿಪೂರ್ಣರು ರಾಮಾನುಜರಿಗೆ ಉಪದೇಶಿಸುತ್ತಾರೆ. ದಯೆ ದಾಕ್ಷಿಣ್ಯ ಮುಂತಾದ ಆತ್ಮಗುಣಗಳಿಗೆ ನಿಧಿಯಾಗಿದ್ದಂತಹ ರಾಮಾನುಜಾಚಾರ್ಯರು, "ನನಗೊಬ್ಬನಿಗೇ ನರಕಪ್ರಾಪ್ತಿಯಾದರೂ ಪರವಾಗಿಲ್ಲ, ಸಾವಿರಾರು ಜೀವಿಗಳು ಉದ್ಧಾರವಾಗಲಿ" ಎಂದು ತಮ್ಮ ಗುರುಗಳ ಕಟ್ಟಪ್ಪಣೆಯನ್ನೂ ಮೀರಿ, ಇಡೀ ಊರಿನ ಜನತೆಗೆ ಮಂತ್ರೋಪದೇಶ ಮಾಡುತ್ತಾರೆ. ಕೋಪಗೊಂಡ ಗುರುಗಳಿಗೆ, "ಗುರುದೇವ! ತಮ್ಮ ಮಾತು ಮೀರಿದ್ದರಿಂದ ನನಗೆ ನರಕಪ್ರಾಪ್ತಿ ಖಂಡಿತ ಎಂದು ಗೊತ್ತು. ಆದರೆ ಇಷ್ಟೊಂದು ಜನಕ್ಕೆ ಮೋಕ್ಷ ಸಿಗುವುದಾದರೆ, ನಾನು ನರಕವನ್ನು ಅನುಭವಿಸಲೂ ಸಿದ್ಧ. ಇಡೀ ಜನಸಮೂಹದ ಕಲ್ಯಾಣಸಾಧನೆಯ ಪುಣ್ಯ ನನ್ನ ಗುರುಗಳಾದ ನಿಮಗೆ ದೊರಕುವುದಾದರೆ ಅದಕ್ಕಿಂತ ಹೆಚ್ಚು ಸಂತೋಷ ನನಗಿನ್ನೇನಿದೆ?" ಎಂದುತ್ತರಿಸಿದರು. ರಾಮಾನುಜರ ಮಾತು ಗೋಷ್ಠಿಪೂರ್ಣರ ಹೃದಯವನ್ನು ತೆರೆಯಿತು. ಗೋಷ್ಠಿಪೂರ್ಣರು ಜ್ಞಾನಕ್ಕೆ ಚೌಕಟ್ಟು ಹಾಕಿ ಬಂಧಿಸಿಡಲು ಪ್ರಯತ್ನಿಸಿದ್ದರು. ರಾಮಾನುಜರು ಆ ಬಂಧನದಿಂದ ಜ್ಞಾನವನ್ನು ಬಿಡಿಸಿದರು. 'ಜ್ಞಾನ ಎಲ್ಲರಿಗಾಗಿ, ಬಿಡುಗಡೆ ಎಲ್ಲರಿಗಾಗಿ' ಎಂದು ಸಾರಿದರು.

ಆಚಾರ್ಯ ರಾಮಾನುಜರು ಚೆಲುವನಾರಾಯಣನ ಉತ್ಸವಮೂರ್ತಿಯನ್ನು ಉತ್ತರಭಾರತದಿಂದ ಮೇಲುಕೋಟೆಗೆ ಅತಿಶೀಘ್ರವಾಗಿ ತರುವ ಕಾರ್ಯದಲ್ಲಿ ನೆರವಾದವರು ದಲಿತರು. ಆದ್ದರಿಂದ ಅವರ ಸಹಾಯವನ್ನು ಕೊಂಡಾಡಿ, ದೇವಾಲಯದೊಳಗೆ ಪ್ರವೇಶಿಸಿ, ದೇವರ ದರ್ಶನ ಮಾಡುವ ಭಾಗ್ಯವನ್ನು ಅವರಿಗೆ ಕೊಟ್ಟರು ರಾಮಾನುಜಾಚಾರ್ಯರು. ಇಂದು ಭಾರತ ಸಂವಿಧಾನದ 17 ನೇ ನಿಬಂಧನೆಯಂತೆ 'ಅಸ್ಪೃಶ್ಯತೆ'ಯನ್ನು ಪ್ರತಿಬಂಧಿಸಿದ ಮೇಲೆ, ಯಾವುದೇ ಜಾತಿಗೆ ಸೇರಿದ ಯಾವುದೇ ಹಿಂದೂವಿಗೂ, ತನ್ನ ಧರ್ಮಕ್ಕೆ ಸೇರಿದ ಯಾವುದೇ ಸಾರ್ವಜನಿಕ ಪೂಜಾಸ್ಥಳಕ್ಕೆ ಪ್ರವೇಶಿಸಲು ಸಮಾನವಾದ ಹಕ್ಕಿದೆ. ಅಲ್ಲದೆ 1955 ರ 22 ನೇ ಅಸ್ಪೃಶ್ಯತಾ ಅಧಿನಿಯಮದ ಪ್ರಕಾರ, ಯಾವುದೇ ವ್ಯಕ್ತಿ ಇನ್ನೊಬ್ಬನ ಈ ಹಕ್ಕನ್ನು ಕಸಿಯಲೆತ್ನಿಸುವುದು ಶಿಕ್ಷಾರ್ಹ ಅಪರಾಧ. ಹಾಗಿರುವಾಗ, ಸಾವಿರ ವರ್ಷಗಳ ಹಿಂದೆ ಶ್ರೀ ರಾಮಾನುಜಾಚಾರ್ಯರು ಈ ಹಕ್ಕನ್ನು ಅಸ್ಪೃಶ್ಯರಿಗೆ ನೀಡಿದ್ದು ನಿಜಕ್ಕೂ ಬಹು ಧೈರ್ಯದ, ಅತ್ಯಂತ ಔದಾರ್ಯದ ಕೆಲಸವೇ ಸರಿ. 'ದೀನದಲಿತರನ್ನು ಕೆಟ್ಟದಾಗಿ ನಡೆಸಿಕೊಳ್ಳಬೇಡಿ, ಸಮಾಜದಲ್ಲಿ ಎಲ್ಲರಂತೆ ಬಾಳುವ ಹಕ್ಕು ಅವರಿಗಿದೆ. ಎಲ್ಲರನ್ನೂ ಸಮಾನವಾಗಿ ಕಾಣಬೇಕು.' ಎಂದು ಮಹಾತ್ಮ ಗಾಂಧೀ ಮತ್ತು ಡಾ. ಅಂಬೇಡ್ಕರ್ ಅವರು ಇಪ್ಪತ್ತನೆಯ ಶತಮಾನದಲ್ಲಿ ಸಾರಿದರೆ, ಹತ್ತನೇ ಶತಮಾನದಲ್ಲೇ, ಸಮಾಜಕ್ಕೆ ಒಂದು ಶಾಪವಾದ ಬಡವ–ಬಲ್ಲಿದ, ಮೇಲು–ಕೀಳು ಎಂಬ ಮನೋಭಾವವನ್ನು ತೊಡೆದುಹಾಕಲು ಪ್ರಯತ್ನಿಸಿದ್ದು ಹಾಗೂ ಆ ನಿಟ್ಟಿನಲ್ಲಿ ಯಶಸ್ಸನ್ನು ಕಂಡಿದ್ದು ರಾಮಾನುಜಾಚಾರ್ಯರ ಹೆಚ್ಚುಗಾರಿಕೆ.

ಕರ್ನಾಟಕದಲ್ಲಿ ತಮ್ಮ ಕಾರ್ಯಕ್ಷೇತ್ರವಾದ ಮೇಲುಕೋಟೆಯ ಸುತ್ತಮುತ್ತ ಹಲವಾರು ಕೆರೆಗಳ ನಿರ್ಮಾಣ ಮಾಡಿಸಿ, ಆ ಪ್ರದೇಶವೆಲ್ಲ ವ್ಯವಸಾಯಕ್ಕೆ ಯೋಗ್ಯವಾಗುವಂತೆ ಮಾಡಿದರು ರಾಮಾನುಜಾಚಾರ್ಯರು. ಅದರಲ್ಲಿ ಬಲುದೊಡ್ಡದೂ, ಇಂದಿಗೂ ಸದಾ ನೀರಿನಿಂದ ತುಂಬಿರುವ ತೊಂಡನೂರು ಕೆರೆ (ಕೆರೆತೊಣ್ಣೂರು) ಆಚಾರ್ಯರ ಲೋಕೋಪಯೋಗಿ ಕಾರ್ಯಕ್ಕೆ ಸಾಕ್ಷಿಯಾಗಿ ಸಾವಿರಾರು ರೈತರ ಬಾಳನ್ನು ಹಸನಾಗಿಸುತ್ತಿದೆ.

ಶ್ರೀ ರಾಮಾನುಜರು ಕೇವಲ ಒಂದು ಪಂಥಕ್ಕೆ ಆಚಾರ್ಯರಾಗಿ, ಒಂದಿಷ್ಟು ಗ್ರಂಥಗಳನ್ನು ರಚಿಸಿ, ಒಂದಷ್ಟು ಬೋಧನೆಗಳನ್ನು ಮಾಡುವುದಕ್ಕೆ ಸೀಮಿತಗೊಳ್ಳದೇ, ಹಿಂದೂ ಧರ್ಮದ ಸಮಗ್ರ ಉನ್ನತಿಗಾಗಿ ಶ್ರಮಿಸಿದರು. ಎಲ್ಲರೆಡೆಗೆ, ಬಹು ಮುಖ್ಯವಾಗಿ ದೀನದಲಿತರೆಡೆಗೆ, ಅವರು ವಿಶೇಷ ಪ್ರೀತ್ಯಾದರಗಳನ್ನು ತೋರಿದರು; ಶುದ್ಧ ಚಾರಿತ್ರ್ಯವುಳ್ಳ, ಭಕ್ತಿಮಾರ್ಗದಲ್ಲಿ ಮನಸ್ಸಿಟ್ಟು ಬಂದ ಯಾವುದೇ ಜಾತಿಯವರಿಗೆ ಶಿಷ್ಯತ್ವವನ್ನು ನೀಡಿ, ಮೋಕ್ಷದ ಹಾದಿ ತೋರಿಸಿ ಕೊಟ್ಟರು.

ಹಿಂದೂ ಪರಂಪರೆಯಲ್ಲಿ ದೇವರೆಡೆಗಿನ ಅಥವಾ ಗುರುವಿನೆಡೆಗಿನ ಮನೋಭಾವ ಹೇಗಿರಬೇಕೆಂಬುದನ್ನು ತಾವು ನಂಬಿದ, ನಡೆದುಕೊಂಡ 'ಸಂಪೂರ್ಣ ಶರಣಾಗತಿ' ಮಾರ್ಗದಿಂದ ತೋರಿಸಿಕೊಟ್ಟರು. "ಸಮಾಜದ ಎಲ್ಲರೂ ತಮ್ಮ ತಮ್ಮ ವೃತ್ತಿಗಳಲ್ಲಿ ತಾವು ಶ್ರೇಷ್ಠರು. ಎಲ್ಲರೂ ಪರಸ್ಪರ ರಕ್ಷಕರಾಗಿರಬೇಕು. ಜ್ಞಾನಿಯಾದವನು ಯಾವುದೇ ಜಾತಿಯಲ್ಲಿದ್ದರೂ ಅವನು ಮಾನ್ಯನು, ಪೂಜ್ಯನು. ಬೆಲೆಯನ್ನು ಕಟ್ಟುವುದು ಕತ್ತಿಗೆ, ಅದನ್ನಿರಿಸುವ ಒರೆಗೆ ಅಲ್ಲ." ಎಂಬುದನ್ನು ಆಚಾರ್ಯ ರಾಮಾನುಜರು ಕೇವಲ ಬೋಧಿಸದೇ, ಆಚರಿಸಿ ನಿರೂಪಿಸಿದರು.

ಹಾಗಾಗಿಯೇ, ಇಂದು ಯಾವುದೇ ಶ್ರೀವೈಷ್ಣವ ದೇವಾಲಯವು ಭಕ್ತಶಿಖಾಮಣಿಯಾದ ಶ್ರೀ ರಾಮಾನುಜಾಚಾರ್ಯರ ಅರ್ಚನಾಮೂರ್ತಿಯಿಲ್ಲದೇ ಪರಿಪೂರ್ಣವಾಗಲಾರದು ಎಂಬ ಸಂಗತಿ ಅತಿಶಯೋಕ್ತಿಯಲ್ಲ.

●

ಗಾಂಧೀಜಿ 150
ಮಾಲಿಕೆ–7

# ಮೂಲ ಶಿಕ್ಷಣ : ಏನು – ಏಕೆ?

■ ಶ್ವೇತಾದ್ರಿ
ನಿವೃತ್ತ ಮುಖ್ಯ ಶಿಕ್ಷಕರು

ಸಮಾಜದಲ್ಲಿ ಯಾವುದು ಜೀವನ ಮೌಲ್ಯಗಳಾಗಿರುತ್ತವೆಯೋ, ಯಾವ ವಿಶಿಷ್ಟ ಗುಣಗಳಿಂದ ಜನರು ಶೋಭಿಸಬಲ್ಲರೋ ಅಂಥ ಮೌಲ್ಯಗಳ ಆಧಾರದ ಮೇಲೆ ಆ ಗುಣಗಳನ್ನು ಬೆಳಸುವುದೇ ಆ ಸಮಾಜಕ್ಕೆ ಅನುಗುಣವಾದ ಶಿಕ್ಷಣ ಪದ್ಧತಿಯಾಗಿರುತ್ತದೆ. ಸರ್ವೋದಯಕ್ಕೆ, ಸಮಂಜಸವಾದ ಶಿಕ್ಷಣಕ್ಕೆ ಗಾಂಧಿಯವರು "ಮೂಲ ಶಿಕ್ಷಣ" ಎಂದು ಕರೆದರು. ದಕ್ಷಿಣ ಆಫ್ರಿಕದಲ್ಲಿ ಸಾಕಷ್ಟು ಪ್ರಯೋಗಗಳನ್ನು ನಡೆಸಿದ ನಂತರ 1909ರಲ್ಲಿ 'ಹಿಂದ್ ಸ್ವರಾಜ್' ಪತ್ರಿಕೆಯಲ್ಲಿ ಗಾಂಧೀಜಿಯವರು ಹೀಗೆ ಹೇಳಿದ್ದಾರೆ. "ಅಕ್ಷರ ಜ್ಞಾನ ನಮ್ಮ ಕಾಮಧೇನುವಲ್ಲ. ನಮ್ಮ ಇಂದ್ರಿಯಗಳನ್ನು ನಿಗ್ರಹಿಸಿ ನಮ್ಮ ತಳಹದಿಯನ್ನು ಬಲಪಡಿಸಿದ ಮೇಲೆ ಅದರಿಂದ ಉಪಯೋಗವಾದೀತು. ನಮಗದು ಭೂಷಣವೂ ಆದೀತು." ಶಿಕ್ಷಣವನ್ನು ಕುರಿತು ಗಾಢವಾಗಿ ಚಿಂತಿಸುತ್ತಿದ್ದ ಗಾಂಧೀಜಿ 1921ರಲ್ಲಿ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ "ಈಗಿನಿಂದಲೇ ಪುಸ್ತಕ ಶಿಕ್ಷಣಕ್ಕೆ ಜೊತೆಯಾಗಿ ನೂಲುವುದನ್ನು ಪ್ರಾರಂಭಿಸೋಣ." ಎಂದು ಕರೆ ಕೊಟ್ಟರು.

ಮೂಲ ಶಿಕ್ಷಣದ ಮೂಲ ಧ್ಯೇಯ ಮಕ್ಕಳ ಸರ್ವತೋಮುಖ ವಿಕಾಸ. 'ಒಂದು ಕೈಗಾರಿಕೆಯ ಮೂಲಕ ಮಕ್ಕಳ ದೈಹಿಕ, ಬೌದ್ಧಿಕ ಮತ್ತು ನೈತಿಕ ಅಭಿವೃದ್ಧಿ'. ಕಸುಬು ವ್ಯಕ್ತಿತ್ವದ ವಿಕಾಸಕ್ಕೆ ಅನುಕೂಲ ಮಾಡಿಕೊಡುತ್ತದೆ. ಪಾಠಶಾಲೆಯಲ್ಲಿ ನಡೆಯುವ ಪ್ರತಿಯೊಂದು ಪಾಠವೂ, ಪ್ರತಿಯೊಂದು ಚಟುವಟಿಕೆಯೂ ಪರಿಸರಕ್ಕೆ ಅನುಗುಣವಾಗಿದ್ದು ಜೀವನಕ್ಕೆ ನೇರವಾಗಿ ಸಂಬಂಧಿಸಿರಬೇಕು. ಅಂಕಗಣಿತ, ವಿಜ್ಞಾನ, ಭೂಗೋಳ, ಭಾಷೆ  ಈ ಎಲ್ಲ ವಿಷಯಗಳೂ ಕಸುಬಿಗೆ ಸಂಬಂಧಿಸಿಯೇ ಇರುತ್ತವೆ. ಈ ರೀತಿ ವಿಷಯಗಳನ್ನು ಕಸುಬಿಗೆ ಸಮನ್ವಯ ಮಾಡಿಕೊಂಡರೆ ವಿದ್ಯಾರ್ಥಿಯು ಕಲಿಯವ ವಿಷಯಗಳೆಲ್ಲವೂ ಅವನ ವ್ಯಕ್ತಿತ್ವದ ಅಂಶವಾಗಿ ಬಿಡುತ್ತದೆ. ಜೀವನಕ್ಕೂ, ಶಾಲೆಯಲ್ಲಿ ಕಲಿಸುವ ಶಿಕ್ಷಣಕ್ಕೂ ನಿಕಟ ಸಂಬಂಧವಿರುವುದರಿಂದ ಶಾಲೆಯಲ್ಲಿ ಕಲಿತ ಯಾವುದೂ ಅನುಪಯುಕ್ತವಾಗುವುದಿಲ್ಲ. ಅಷ್ಟೇ ಅಲ್ಲ, ಶಾಲೆಯಲ್ಲಿ ಕಲಿಸುವುದೆಲ್ಲವನ್ನೂ ಇನ್ನೂ ಬೇಗನೆ ಮತ್ತು ಇನ್ನೂ ಅರ್ಥವತ್ತಾಗಿ ಕಲಿಸಬಹುದು. ಕಲಿತದ್ದು ಜೀವನದುದ್ದಕ್ಕೂ ಉಳಿದು ದೈನಂದಿನ ಜೀವನಕ್ಕೆ ಉಪಯೋಗವಾಗಿ ವಿದ್ಯಾರ್ಥಿಯು ಸಭ್ಯ ಪ್ರಜೆಯಾಗಿ ಬೆಳೆಯಲು ಅನುಕೂಲವಾಗಿರುತ್ತದೆ.

ಇಂಥ ಒಂದು ಶಿಕ್ಷಣ ಪಡೆದ ವಿದ್ಯಾರ್ಥಿಯು ಒಂದು ಕಸುಬಿನಲ್ಲಿ ಸಾಕಷ್ಟು ಕುಶಲತೆಯನ್ನು ಪಡೆದಿರುತ್ತಾನೆ. ಮುಂದೆ ತನ್ನ ಉಪಜೀವನವನ್ನು ಸ್ವತಂತ್ರವಾಗಿ ಗಳಿಸುವ ಸಾಮರ್ಥ್ಯವನ್ನು ಪಡೆಯುವ ಜೊತೆಗೆ ಶಲೆಯಲ್ಲಿ ತಯಾರಿಸುವ ಪದಾರ್ಥಗಳ ಮಾರಾಟದಿಂದ ಶಿಕ್ಷಕರ ಸಂಭಾವನೆಯನ್ನೂ ಗಳಿಸಬಹುದು. ಇದನ್ನು ಗಾಂಧೀಜಿ "ಸ್ವಾವಲಂಬಿ ಶಿಕ್ಷಣ" ಎಂದು ಕರೆದರು. ಆದುದರಿಂದ ಮೂಲ ಶಿಕ್ಷಣದ ಯಶಸ್ಸಿನ ಒರೆಗಲ್ಲು ಸ್ವಾವಲಂಬನ.

ಮಗುವಿನ ಸರ್ವತೋಮುಖ ವಿಕಾಸವೆಂದರೆ ಮಗುವಿನ ಬುದ್ಧಿ, ದೇಹ ಮತ್ತು ಆತ್ಮಗಳ ವಿಕಾಸವಾಗಿರುತ್ತದೆ. ಕಸುಬಿನ ಮೂಲಕ ಶಿಕ್ಷಣ ನಡೆದಾಗ ವಿದ್ಯಾರ್ಥಿಯ ಮನಸ್ಸು, ಶರೀರ ಎರಡಕ್ಕೂ ಶಿಕ್ಷಣ ಒದಗುತ್ತದೆ. ಗಾಂಧೀಜಿಯವರು 'ನೈತಿಕ ಶಿಕ್ಷಣ'ಕ್ಕೆ ಪರ್ಯಾಯವಾಗಿ 'ಆತ್ಮ ಶಿಕ್ಷಣ' ಪದವನ್ನು ಬಳಸಿದರು. ನೈತಿಕ ಶಿಕ್ಷಣ, ಚಾರಿತ್ರ್ಯ ಶಿಕ್ಷಣ ಮತ್ತು ಆತ್ಮಕ್ಕೆ ಬೇಕಾದ ಶಿಕ್ಷಣ – ಇವು ಮೂರು ಒಂದೇ. ಇದು ಮತೀಯ ಶಿಕ್ಷಣವಲ್ಲ ಎಂದು ಗಾಂಧೀಜಿ ಪದೇ ಪದೇ ಸ್ಪಷ್ಟಪಡಿಸುತ್ತಿದ್ದರು.

ವ್ಯಕ್ತಿ ಸರಳ ಜೀವನ ನಡೆಸಿ ಉಪಯುಕ್ತವಾದ ಪ್ರಜೆಯಾಗಬಲ್ಲಂತಹ ಶಿಕ್ಷಣವನ್ನು ಗಾಂಧೀಜಿ ಪ್ರತಿಪಾದಿಸಿದರು. ಆದರೆ ನಮ್ಮ ದೇಶದಲ್ಲಿ ಶಿಕ್ಷಣಕ್ಕೂ ನೌಕರಿಗೂ, ಶಿಕ್ಷಣಕ್ಕೂ ಅಧಿಕಾರಕ್ಕೂ, ಶಿಕ್ಷಣಕ್ಕೂ ಸಾಮಾಜಿಕ ಪ್ರತಿಷ್ಠೆಗೂ ನಿಕಟ ಸಂಬಂಧ ಬೆಳೆದು ಬಂದಿದೆ. ಪ್ರತಿಷ್ಠಿತ ಸಮಾಜದ ಪ್ರತಿಯೊಬ್ಬನೂ ತನ್ನ ಮಕ್ಕಳು ಉನ್ನತ ಸ್ಥಾನ ಗಳಿಸಬೇಕೆಂಬ ಉದ್ದೇಶದಿಂದಲೇ ಶಿಕ್ಷಣವನ್ನು ಕೊಡಿಸುತ್ತಾನೆ. ಅವರು ಹೊಲದಲ್ಲಿ ದುಡಿದು ಗೃಹ ಕೈಗಾರಿಕೆಯೊಂದರಲ್ಲಿ ಕುಶಲರಾಗಿ ಸರಳ ಜೀವನ ನಡೆಸುವ ವ್ಯಕ್ತಿಗಳಾಗುವುದು ಆ ಪ್ರತಿಷ್ಠಿತ ವ್ಯಕ್ತಿಗೆ ಬೇಡ. ಆದ್ದರಿಂದ ಸಮಾಜಕ್ಕೆ ಮೇಲ್ಪಂಕ್ತಿ ಹಾಕಿಕೊಡುವವರು ಮೂಲ ಶಿಕ್ಷಣವನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲಿಲ್ಲ. ಆದುದರಿಂದಲೇ ಸರ್ಕಾರಗಳು ಮೂಲ ಶಿಕ್ಷಣವನ್ನು ಸಾರ್ವತ್ರಿಕ ಪದ್ಧತಿಯನ್ನಾಗಿ ಮಾಡಲಿಲ್ಲ. ಮೂಲ ಶಿಕ್ಷಣ ಜನಪ್ರಿಯವಾಗದಿರಲು ಇದು ಮುಖ್ಯವಾದ ಕಾರಣ.

ಮೂಲ ಶಿಕ್ಷಣದಲ್ಲಿ ಒಂದೆರಡು ಕೊರತೆಗಳಿದ್ದರೂ ಅದರ ತಿರುಳು ನಮ್ಮ ರಾಷ್ಟ್ರಕ್ಕೆ , ನಮ್ಮ ಸಮಾಜಕ್ಕೆ ಬಹಳ ಉಚಿತವಾಗಿದ್ದು ಅನೇಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಹಾಯಕವಾಗಬಹುದು. ಮುಖ್ಯವಾಗಿ ಶಿಕ್ಷಣದಲ್ಲಿ ಕಾಣುತ್ತಿರುವ ಅಸಮತೆ, ಅಶಿಸ್ತು, ಅನಿರ್ದಿಷ್ಟತೆ ಮತ್ತು ಅಪವ್ಯಯಗಳಿಗೆ ತಕ್ಕ ಮದ್ದಾಗಬಹುದು. ನಮ್ಮ ಶಿಕ್ಷಣಕ್ಕೆ ರಾಷ್ಟ್ರೀಯ ಸ್ವರೂಪ ದೊರೆತು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಪ್ರಗತಿ ಹೊಂದಲು ಸಾಧ್ಯವಾಗಬಹುದು. ಮೂಲ ಶಿಕ್ಷಣದ ಈ ಮೂರು ಅಂಶಗಳನ್ನು ಅನುಷ್ಠಾನಕ್ಕೆ ತಂದಲ್ಲಿ ಶಿಕ್ಷಣದಲ್ಲಿ ಸುಧಾರಣೆಯಾಗಬಹುದು. ಮೊದಲನೆಯದಾಗಿ ಶಿಕ್ಷಣದ ಮಾಧ್ಯಮ ತಾಯಿ ನುಡಿಯೇ ಆಗಿರಬೇಕು. ಎರಡನೆಯದಾಗಿ ಶ್ರೀಮಂತರ ಮಕ್ಕಳಿಗೇ ಒಂದು ಬಗೆಯ ಶಾಲೆ, ಬಡಜನರ ಮಕ್ಕಳಿಗೇ ಒಂದು ಬಗೆಯ ಶಾಲೆ ಎನ್ನುವ "ಅಸಮಾನ" ಶಿಕ್ಷಣ ಪದ್ಧತಿ ಹೋಗಬೇಕು. ಶಾಲೆಯನ್ನು ಯಾವ ಸಂಸ್ಥೆಯು ನಡೆಸಿದರೂ ಆ ಶಾಲೆಯ ಸುತ್ತಮುತ್ತಲಿನ ಜನರ ಎಲ್ಲ ಮಕ್ಕಳೂ ಆ ಶಾಲೆಗೆ ಹೋಗುವಂತಾಗಬೇಕು. ಮೂರನೆಯದಾಗಿ ಒಂದು ಉಪಯುಕ್ತವಾದ ಕಸುಬನ್ನು ಎಲ್ಲಾ ಶಾಲೆಗಳಲ್ಲಿಯೂ ಹೇಳಿ ಕೊಡಬೇಕು.

ಗಾಂಧೀಜಿಯವರು ತಮ್ಮ ಕೊನೆಯ ದಿನಗಳಲ್ಲಿ "ನನ್ನ ನಾಡಿಗೂ, ಜಗತ್ತಿಗೂ ಮೂಲ ಶಿಕ್ಷಣ ನನ್ನ ಶ್ರೇಷ್ಠ ಕೊಡುಗೆ. ಅದು ಬದುಕಿರುವವರೆಗೆ ಭಾರತದ ಜನಕೋಟಿಯ ಬುದ್ಧಿ, ಹೃದಯಗಳಲ್ಲಿ ನಾನು ಬದುಕಿರುತ್ತೇನೆ. ಮೂಲ ಶಿಕ್ಷಣ ಮರೆತು ಹೋದುದಾದರೆ ನಾನು ಮರೆತು ಹೋಗುತ್ತೇನೆ" ಎಂದು ಹೇಳುತ್ತಿದ್ದರು. ಮೂಲ ಶಿಕ್ಷಣವನ್ನು ರಾಷ್ಟ್ರ ಮರೆತು ರಾಷ್ಟ್ರಪಿತನಿಗೆ ಕೃತಘ್ನವಾಗಿದೆಯೇ?

●

# ಕೋವಿಡ್–19 ಹಿನ್ನೆಲೆಯಲ್ಲಿ ಅಗತ್ಯ ಇರುವವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯರಿಂದ ರಾಜ್ಯದ ವಿವಿಧೆಡೆ ಅಗತ್ಯ ಸಾಮಗ್ರಿಗಳ ವಿತರಣೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ರಾಜ್ಯದ ಹಲವೆಡೆ ಅಗತ್ಯ ಸಾಮಗ್ರಿಗಳ ವಿತರಣೆ ಮಾಡಲಾಗಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಧಾರವಾಡ ಜಿಲ್ಲೆಯ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಪಟ್ಟಣ ಪಂಚಾಯತಿಗಳಲ್ಲಿ ಸ್ಯಾನಿಟೈಸರ್ ಹಾಗೂ ಮಾಸ್ಕಗಳ ವಿತರಣೆ ಕೋವಿಡ–19 ವಿರುದ್ಧದ ಹೋರಾಟದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕಳೆದ ಒಂದು ತಿಂಗಳಿನಿಂದ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಇಂದು ಸೇವಾಕಾರ್ಯದ ಭಾಗವಾಗಿ ಹುಬ್ಬಳ್ಳಿ ನಗರ, ಧಾರವಾಡ ಗ್ರಾಮಾಂತರ, ಅಳ್ನಾವರ ಪಟ್ಟಣ ಪಂಚಾಯತಿ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆಯಲ್ಲಿ ಕೊರೋನಾ ವಾರಿಯರ್ಸ್‌ಗಳಾಗಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಸ್ಯಾನಿಟೈಸರ್ ಹಾಗೂ ಮಾಸ್ಕಗಳ ವಿತರಣೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ, ಬಿಜೆಪಿಯ ವಿಭಾಗ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಜಯತೀರ್ಥ ಕಟ್ಟಿ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯರು ಉಪಸ್ಥಿತರಿದ್ದರು.













MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-04-2020 Date of Posting 20h or 21st of every month Posted at Periodical Rate

# ಕೋವಿಡ್-19 ತಡೆಗಟ್ಟಲು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವಂತೆ ಮಾನ್ಯ ಜಿಲ್ಲಾಧಿಕಾರಿ ಹಾಗೂ ಉಸ್ತುವಾರಿ ಸಚಿವರಿಗೆ ಮನವಿ



ರಾಜ್ಯದಲ್ಲಿ ಕೊರೋನಾ ವೈರಸ್ ಸೋಂಕು ತೀವ್ರವಾಗಿ ಹರಡುವುದನ್ನು ತಪ್ಪಿಸಲು ಅಗತ್ಯ ಸೇವೆಗಳಡಿ ಇರುವ ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಪೋಲಿಸ್ ಇಲಾಖೆ ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಶಿಕ್ಷಣ ಇಲಾಖೆಯ ಶಿಕ್ಷಕರನ್ನೂ ಕೂಡಾ ಕೊವಿಡ್-19 ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ಹಲವು ದಿನಗಳಿಂದ ಹಾಗೂ ಮುಂದಿನ ದಿನಗಳವರೆಗೆ ಕಾರ್ಯನಿರ್ವಹಿಸುವಂತೆ ಸರಕಾರ ನಿರ್ದೇಶಿಸಿ ಆದೇಶಿಸಲಾಗಿದೆ. ಆದ್ದರಿಂದ ಅವರಿಗೂ ಕೂಡಾ ಇತರ ಇಲಾಖೆಗಳ ಸರಕಾರಿ ನೌಕರರಿಗೆ ಒದಗಿಸಿಕೊಟ್ಟಿರುವ ಜೀವ ವಿಮೆ ಹಾಗೂ ಸಂಬಂಧಿಸಿದ ಅಗತ್ಯ ಸೇವಾ ಸೌಲಭ್ಯಗಳನ್ನು ಮತ್ತು ಎಲ್ಲ ಸುರಕ್ಷತಾ ಪರಿಕರಗಳನ್ನು ಶಿಕ್ಷಣ ಇಲಾಖೆಯ ಶಿಕ್ಷಕರಿಗೂ ಕೂಡಾ ಒದಗಿಸಿಕೊಡಬೇಕೆಂದು ವಿನಂತಿಸಿ ಮಾನ್ಯ ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀಮತಿ ದೀಪಾ ಚೋಳನರವರಿಗೆ ಹಾಗೂ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಜಗದೀಶ ಶೆಟ್ಟರರವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಡಾ. ರಘು ಅಕಮಂಚಿ ರವರು ಮನವಿ ಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀ ಉಮೇಶ ದುಶಿ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ಶಿಕ್ಷಕರು ಹಾಗೂ ಉಪನ್ಯಾಸಕರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯರಿಂದ ರಕ್ತದಾನ



ಕೋವಿಡ್-19 ಲಾಕ್ ಡೌನ್ ಕಾರಣದಿಂದಾಗಿ ರಾಷ್ಟ್ರೋತ್ಥಾನ ರಕ್ತ ಭಂಡಾರದಲ್ಲಿ ರಕ್ತ ಸಂಗ್ರಹದ ಕೊರತೆ ಉಂಟಾಗಿ ತುರ್ತು ಅವಶ್ಯಕತೆ ಇರುವ ರೋಗಿಗಳಿಗೆ ರಕ್ತ ನೀಡುವುದು ತುಂಬಾ ಸಮಸ್ಯೆಯಾಗಿದ್ದರಿಂದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹುಬ್ಬಳ್ಳಿ ಘಟಕದ ಸದಸ್ಯರು ರಕ್ತದಾನ ಮಾಡಿದರು.

12 ಮತ್ತು 19 ರಂದು ಎರಡು ಹಂತದಲ್ಲಿ ರಕ್ತದಾನ ಮಾಡುವ ಯೋಜನೆ ಮಾಡಿಕೊಂಡು ಮೊದಲನೇ ಹಂತದಲ್ಲಿ ರಕ್ತದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಸಂದೀಪ ಬೂದಿಹಾಳ, ರಾಷ್ಟ್ರೋತ್ಥಾನ ರಕ್ತ ಭಂಡಾರದ ಪ್ರಮುಖರಾದ ದತ್ತಾತ್ರೇಯ ಕುಲಕರ್ಣಿ, ಲೆಕ್ಕ ಪರಿಶೋಧಕರಾದ ವಿನಯ ಕುಲಕರ್ಣಿ ಅವರು ಉಪಸ್ಥಿತರಿದ್ದರು.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com